ಕಾರಣಕ್ಕೆ ಶಿಕ್ಷೆ ಆಯಿತು ಅದಕ್ಕೆ ಯಾರು ಕಾರಣರು ಆ ವಿಷಯಗಳಿಗೆ ಹೋಗದೆ ಸರ್ವೋಚ್ಚ ನ್ಯಾಯಾಲಯದ ಆಜ್ಞೆಗೆ ತಲೆಬಾಗಿ ಇಂತಹ ಸ್ಥಿತಿ ಬರಬಾರದು ಅಂತೇಳಿ ಮೂರು ದಿವಸದ ಹಿಂದೆ ಹೋಗಿ ರಾಷ್ಟ್ರಪತಿಗಳು, ಪ್ರಧಾನಮಂತ್ರಿಗಳು, ಕಾನೂನು ಮಂತ್ರಿಗಳು, ಗೃಹಮಂತ್ರಿಗಳು ಮತ್ತು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನೆಲ್ಲ ಕಂಡು ಈ ಅನ್ಯಾಯ ಆಗಬಾರದು ಎಂದು ಪ್ರಯತ್ನ ಮಾಡುತ್ತಿದ್ದಾರೆ. ಇಲ್ಲಿ ಯಾರೋ ಇದಕ್ಕೆ ಸರ್ಕಾರ ಹೊಣೆ ಅಂಥ ಹೇಳಿದರೆ ನಾವು ಅದಕ್ಕೆ ಉತ್ತರವನ್ನು ಕೊಡುತ್ತೇವೆ. ಆ ಮಾತು ಬೇರೆ, ಸರ್ಕಾರ ಅಲ್ಲ. ಮಾನ್ಯ ಮುಖ್ಯಮಂತ್ರಿಗಳು ಸರ್ವಪ್ರಯತ್ನ ಮಾಡಿದ್ದಾರೆ. ಅದಕ್ಕೋಸ್ಕರ ಇದು ಬಹಳ ಸೂಕ್ಷ್ಮವಾದ ವಿಷಯ, ಅವರು ಬರಲಿ, ನಾಳೆ ಬಂದ ತಕ್ಷಣ ಅವರು ಸದನಕ್ಕೆ ಏನು ಹೇಳಬೇಕು, ಸಂವಿಧಾನದಲ್ಲಿ ಏನು ಹೇಳಲಿಕ್ಕೆ ಸಾಧ್ಯ ಅದನ್ನೆಲ್ಲ ಹೇಳುತ್ತಾರೆ. We cannot also comment on the Supreme Court judgement. ಇದರೊಳಗೆ ಬಹಳ ಸೂಕ್ಷ್ಮತೆ ಇದೆ ಮಾನ್ಯ ಸದಸ್ಯರಿಗೆ ಗೊತ್ತಿದೆ. ಆದ್ದರಿಂದ ನಾವು ಈಗ ಬೇಡಿಕೆಗಳ ಮೇಲಿನ ಚರ್ಚೆಯನ್ನು ಮುಂದುವರೆಸಿಕೊಂಡು ಹೋಗಬಹುದು.

ಶ್ರೀ ವಾಟಾಳ್ ನಾಗರಾಜ್ : ನನಗನಿಸತಕ್ಕಂಥದ್ದು, ಇದು ಇಷ್ಟರಲ್ಲೇ ಮುಗಿಯುವಂತದ್ದಲ್ಲ, ಇದರ ಸಮಗ್ರ ಚರ್ಚೆಯಾಗಬೇಕಾಗುತ್ತದೆ. ಏಕೆಂದರೆ ಇದು ಅಷ್ಟು ಸುಲಭವಾಗಿ ಮುಗಿಯುವಂತದ್ದಲ್ಲ, ಆದ್ದರಿಂದ ತಾವು ನಾಳೆಯಾದರು ಇದನ್ನು ಚರ್ಚೆಗೆ ತೆಗೆದುಕೊಳ್ಳುತ್ತೀರೋ?

ಅಧ್ಯಕ್ಷರು : ನಾನು ನಾಳೆ ತೆಗೆದುಕೊಳ್ಳುತ್ತೇನೆ, ನಾಡಿದ್ದು ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತಾ ಇಲ್ಲ, ನನ್ನ ಕಛೇರಿಗೆ ಏನು ನೋಟೀಸ್ ಬರುತ್ತದೆ, ಯಾವ ಸದಸ್ಯರು ಏನು ನೋಟೀಸ್‌ಕೊಡುತ್ತಾರೆ ಎಂಬುದರ ಮೇಲೆ ಆ ಕಾಲಂ ನೋಡುತ್ತೇನೆ, ಅದರ ಪ್ರಕಾರ ಏನು ಅವಕಾಶ ಮಾಡಿಕೊಡಬೇಕೋ ಹಾಗೆ ನಾನು ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ನೀತಿಯ ಪ್ರಕಾರವೆ ನಾನು ಹೇಳಿದೆ. ಸರ್ಕಾರಕ್ಕೆ ತಮ್ಮ ಮೂಲಕ ಏನು ಹೇಳುತ್ತೇನೆ ಅಂದರೆ, ಈ ಬಗ್ಗೆ ಸರ್ಕಾರವೆ ನೇರವಾಗಿ ಚರ್ಚೆಗೆ ಬರಬೇಕು. ನಮ್ಮ ಸರ್ಕಾರ ಏನೇನು ಮಾಡಿದೆ ಏನೇನು ಪರಿಸ್ಥಿತಿ ಆಗಿದೆ, ವಾಸುದೇವನ್ ಬಗ್ಗೆ ನಾವು ಹೇಗೆ ನಡೆದುಕೊಂಡಿದ್ದೇವೆ, ಯಾವ ಯಾವ ರೀತಿ, ಅದರ ಕಡತಗಳೇನು? ಇದೆಲ್ಲವನ್ನು ಸರ್ಕಾರ ಸಭೆ ನಡೆಯುವಾಗ.....

ಅಧ್ಯಕ್ಷರು : ಚರ್ಚೆಗೆ ತೆಗೆದುಕೊಂಡಾಗ ಅವೆಲ್ಲಾ ಮಾಡೋಣ. ಈಗ ಅವರಿಗೆ ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಯಾರಿಗೂ ಅವಕಾಶವೆ ಸಿಗಲಿಲ್ಲ. ದಯಮಾಡಿ ಬೇಡಿಕೆಯ ಮೇಲಿನ ಚರ್ಚೆಯನ್ನು ಮುಂದುವರೆಸಿ.

2.30 ಪಿ.ಎಂ.

ವಿತ್ತೀಯ ಕಾರ್ಯಕಲಾಪಗಳು

Discussion on demands for grants for the year 1995-96

+ Sri Qamarul Islam (Gulbarga) : Mr. Speaker Sir, There are sixteen items of Demands for discussion today and I am aware that you have given me 20 minutes. I have select only a few Demands and I wish to discuss on the Demands of Education Department. As we all know, primary education is compulsory under the directive principles of the Constitution and in the year 1986, a National Educational Policy was adopted.

(Mr. Deputy Speaker Sri. M.S. Patil In the Chair)

In this National Education Policy, very much importance was given to the primary education and the same policy was revised in the year 1992 and in the year 1992, it was decided that the primary Education is to be universalised by the end of 2000 A.D. for this Universalisation number of schemes have been taken up. Among them one of step taken is that any village or any hamlet which is having a population of more than 300 students that villageor hamlet should have a Primary School. Secondly, the enrolment of village or hamlet should be more than 80%. Thirdly plan for minimum education should be there, for that particular stage, either it is from 1 to 4th and then from 5th to 7th. So, these were the steps taken to make primary education to be universalised by the end of 2000 A.D. and number of facilities have been given. Many of our colleagues have discussed on this subject. Sri Sriramareddy has putforth very beautiful by about certain aspects in the Primary Education. For example, for the students particularly belonging to Scheduled Caste/Scheduled Tribe, free supply of Text-books scheme is there. and also there is free distribution of Uniform cloth, supply of Energy food to the students, supplying furniture and also there is a scheme to meet the teaching needs of the institutions. Here, as per the report what is the reason for giving all these facilities to the students and starting number of primary institutions in different parts of the State and different villages? what is the reason? Why the drop-outs are maximum? The main purpose of bringing this scheme or implementing this scheme is only to see that the children should get attracted towards education, because it is compulsory one. They should feel to be there in the institution.

But actually we are seeing that maximum drop-outs are there. According to the report which has been submitted by the Government, the number of students attending the schools from 1st to 4th standards is only 54% and from 5th to 7th it is 25%. That means there is a 50% drop out. If the children go to school from first standard, by the time they reach 5th Standard, 50% of the students will leave the institution. This is the maximum drop-out as per the report which has been submitted here. Again, if you go to the VIII Standard, I think another 50% drop-out will be there and by the time it comes to the College level education, hardly 10 to 15% of the students who were already admitted in the first Standard will reach the college level and by the time they pass their higher education or technical Education, it will be hardly 4% or 5% Why? Where is the difficulty? Here, my friend Srirama Reddy has quoted that it is due to the non-committed officials, irrelevant syllabus and unwillingness of the Government in uncertain conditions. He has very beautifully expressed his opinion. How best it fits? It is your

report only, it is the report of the Government. As per the report, the Government says that for adopting the revised National Education Policy, primary education must be made compulsory for the children from the age of four to fourteen years. You have started number of schemes. All these schemes are implemented and when all these schemes are implemented why there is a drop-out? What is the reason? Who is at fault? Whether the Government is really sincerely watching as to whether the schemes which have been implemented are properly utilised or not. So many things are there. Regarding Printing of Books, till today, P.U.C., and college level books of the linguistic minorities have not yet been printed. Nearly four months are over and the students are not getting the books. When they cannot read in the absence of the text books, how can they appear for the examination? is the Government not responsible for the delay and the hardship consequently caused to the students community?

The other day, Energy Food packed was shown to the Hon'ble Speaker here. Though there was a stamp of 5 Kgs., on the packet, hardly one Kg., food was there in the packet. I have seen with my own eyes that these packets which have been given to the students, they themselves have not consumed them and they have given to the cows and other animals. I went to a friend's house and I asked what is this, he said they were Energy Food packets given to the students and he was giving to the cows. I am telling you the fact. This way, this scheme has been misutilised. There is no sincerity.

Regarding supply of Uniforms, the Hon'ble Minister for Primary Education said that the Government has decided, just to save some money, they have decided to give the Uniform cloth pieces. Last year also,uniform pieces were given without stitching them, just to save some money. Majority of the students have not stitched their uniforms. After knowing fully well, number of articles have come. many letters have been written requesting that the Government should not give the uniform cloth in pieces and that they should give it in a complete stitched form. But again the Government has taken a decision to give uniforms in the form of pieces. If you go and visit after the supply has been made. as to how many students are wearing whether the parents have stitched. the uniform cloths or not, you will find that it will not be stitched and that the cloths will be utilised for some other purpose. So, it is better the Government should Announce that the supply of uniform pieces will not be made in pieces, but only in the form of complete stitched

form. When we are spending 17 crores only for this purpose, another one or two crores should be spent to see that the students get the stitched cloths. Regarding the Energy Food packet which has been supplied by our Agro-corn Products, you must hold an enquiry. Sri Srirama Reddy has also suggested that there should be an enquiry. I wish to suggest that, if the Government is really sincere, in seeing that these schemes are honestly implemented, then there should be a House Committee. I demand in this august house that there should be a House Committee which should travel throughout the State to see whether all these schemes prevalent in the Education Department, are really implemented or not, whether timely books are printed or not, whether the syllabus is there or net. All these things are very much needed. These students are the future of our country. Maximum concentration is being given for the Medical and Engineering colleges where there are donations and other things, whatever fees have been fixed and whatever quota has been fixed. Suppose, if the Supreme Court has fixed 50,000 Dollars will anybody get a seat with 50,000 Dollars? I want to know what steps the Government has taken? If anybody comes and give an affidavit that such and such an institution is demanding money, will the Government take action action against that institution? I know it is only a paper statement.

Even with 50,000 dollars we are not getting. Extra amount is being asked, even where it is a minority institution wherein 50% has been given. Nobody is getting the fees fixed by the Government. There are NRI quota. All these things are gong on. People have lost faith. People say that because of fixation of 50,000 or 30,000 which is fixed by the Supreme Court, for whatever 10%, 15% quota has been given or whatever 50% has been given to the minority institution, the institutions are again demanding five lakhs for this 50%.

They are demanding Rs.5 lakhs to 10 lakhs extra amount. So even though there is law prevailing, we want that the Government should take action. There should be an advertisement that if there is any demand, in secrecy also, that money over and above the fixed fees should be paid, the people should give complaint. There should be a merit. If 50% muslims of minorities, let the merited 50% minority students get admission on the the basis of the fees fixed by the Supreme Court.'

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ಕಮರುಲ್ ಇಸ್ಲಾಂರವರು, ಸರ್ಕಾರಕ್ಕೆ ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ಸರ್ಕಾರದ ಪರವಾಗಿ ನಾನು ಅದನ್ನು ಸ್ವಾಗತ ಮಾಡುತ್ತೇನೆ. ಐವತ್ತು ಸಾವಿರ ಡಾಲರ್ಸ್ ಮೇಲೆ.....

ಉಪಾಧ್ಯಕ್ಷರು: ಸಿಂಧ್ಯಾರವರೆ, ಅವರಿಗೆ ಮಾತನಾಡುವುದಕ್ಕೆ ಒಂದು ಕಾಲಮಿತಿ ಇದೆ. ಅವರಿಗೆ ಆ ಕಾಲಕ್ಕಿಂತ ಹೆಚ್ಚು ಮಾತನಾಡುವುದಕ್ಕೆ ಅವಕಾಶವಿಲ್ಲ. ಯಾರು ಮಧ್ಯಪ್ರವೇಶ ಮಾಡಬಾರದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅವರಿಗೆ ಸರ್ಕಾರದ ಧೋರಣೆ ಏನು ಎಂದು ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು : ತಾವು ಏನಾದರೂ ಹೇಳುವುದಿದ್ದರೇ, ಉತ್ತರ ಕೊಡುವ ಸಂದರ್ಭದಲ್ಲಿ ಹೇಳಿ. ಈಗ ಒಂದು ಅಂಡರ್‌ಸ್ಟಾಂಡಿಂಗ್ ಬಂದಿಂದೆ. ಈಗ ಅವರು ಇಪ್ಪತ್ತು ನಿಮಿಷಕ್ಕಿಂತ ಹೆಚ್ಚಿಗೆ ಮಾತನಾಡುವಂತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಒಂದೇ ಒಂದು ನಿಮಿಷ ತೆಗೆದುಕೊಳ್ಳುತ್ತೇನೆ. ಬೇಕಾದರೆ ನಮ್ಮ ಪಕ್ಷದಲ್ಲಿ ಒಂದು ನಿಮಿಷವನ್ನು ಕಡಿಮೆ ಮಾಡಿಬಿಡಿ. ಕಮರುಲ್ ಇಸ್ಲಾಂ ರವರಿಗೆ ನಾನು ಏನು ಹೇಳುವುದೆಂದರೆ, ಐವತ್ತು ಸಾವಿರ ಡಾಲರ್ ಮೇಲೆ ಅಲ್ಲಿ ಕೊಟ್ಟರು ಸೀಟು ಕೊಡುವುದಿಲ್ಲ ಎಂದು ಏನು ಅಫಿಡವಿಟ್ ಕೊಟ್ಟಿದ್ದಾರೆ, ಕೊಟ್ಟರೂ ಕೂಡ ಸರ್ಕಾರ ಕ್ರಮ ತೆಗೆದುಕೊಳ್ಳುವುದಿಲ್ಲವೆಂದು ಹೇಳುತ್ತಾರೆ, ಏಕೆಂದರೆ, ಇದು ತುಂಬಾ ಕೆಟ್ಟ ಸೂಚನೆಯನ್ನು ಕೊಡುತ್ತದೆ ಅಧ್ಯಕ್ಷರೆ. ಸರ್ಕಾರದ ಪರವಾಗಿ ಇಲ್ಲಿ ನಾವು. ಆಡಳಿತ ಮಾಡತಕ್ಕಂತಹ ಜನ, ಇವರು ಹೇಳುತ್ತಾ ಇರತಕ್ಕಂತಹದ್ದಕ್ಕೆ ನಾವು ಸರಿಯಾದ ರೀತಿಯಲ್ಲಿ ಉತ್ತರವನ್ನು ಕೊಡದೇ ಹೋದರೆ, ನಮ್ಮ ಬಗ್ಗೆ ಸುದ್ದಿ ಪ್ರಕಟವಾಗಿಬಿಡುತ್ತದೆ. ಅದಕ್ಕೋಸ್ಕರ ನಾನು ಈ ವಿವರಣೆಯನ್ನು ಕೊಡುತ್ತಿದ್ದೇನೆ. ಆ ರೀತಿ ಯಾರು ಇದುವರೆವಿಗೂ ಕೊಟ್ಟಿಲ್ಲ. ಅಲ್ಪಸಂಖ್ಯಾತರ ಪರವಾಗಿ ಇರತಕ್ಕಂತಹವರು ಅಥವಾ ಸೀಟು ಸಿಗದೇ ಇರತಕ್ಕಂತಹವರು ಅಲ್ಪಸಂಖ್ಯಾತರ ಸಂಸ್ಥೆಗಳಲ್ಲಿ ಶೇಕಡ 50 ರಷ್ಟು ಸೀಟುಗಳು ಅಲ್ಪಸಂಖ್ಯಾತರಿಗೆ ಸಿಕ್ಕಿಲ್ಲ ಎಂದು ಅಫಡವಿಟ್ ಅನ್ನು ಕೊಡುವುದಲ್ಲ, ಆ ಬಗ್ಗೆ ನಮಗೆ ಸುದ್ದಿಯನ್ನು ಕೊಟ್ಟರೂ ಕೂಡ ನಾವು ಕಾನೂನು ಪ್ರಕಾರವಾಗಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

Sri QAMARUL ISLAM : My suggestion is, the Government should also give an advertisement saying that if any minority institution of the president or the Secretary or the Governing Council Members of such institutions are demanding money over and above the fixed fees, let the students come and given an affidavit to that affect. The people will come. As you have get in CET Office, there should be an officer in - charge. People will come and give the affidavit. Once you take that action, definitely people will have confidence in you. That is what I m suggesting. Just make an advertisement in such a way.

Sir, there was a Janata Darshan by the Hon'ble Chief Minister. The Hon'ble Minister for Home was also there. In the year 1993 there was a relaxation of the economic measure. During that period in March 1993, there were aided Institutions having additional classes and due to this, there were

vacancies created by natural growth. Against natural growth of vancancies, the Heads of Departments were given powers to make appointments and approval of the teachers. So as per that order of March 1993, the Director of Primary Education appointed and gave approval to the appointment of teachers and the CPI Has given approval to the appoint of high school teachers and Jr. college lecturers etc. Then, after 4-6 months, there was another order under which this power of approval of appointments has been withdrawn. Later on in the year 1994 after 3 months, again there was an order according to which powers were again given to the Heads of departments. But there is a difference between this order and that order. In the earlier order the Heads of Departments were given not only the power of appointment and approval but also to give aid to those institutions so that the teachers would get salary. This has happened not only in Gulbarga, but I can quote names of teachers and schools, in almost all the districts of Karnataka State they were getting salary. The teachers who are working in the aided institutions for the last 15-20-22 Years, they were just weeping in the Janata Darshan. The photo has come. I was standing by the side of the Hon'ble Chief Minister. It was news for Hon'ble Chief-Minister. He asked, "Is it true qamarul Islam? Are they working?"

Sir, the person was saying he was working for 22 years as per the Government orders but was not getting salary. There are many because the file was under correspondence and all that. So what I wanted when the assurance was given by the Hon'ble Chief Minister, this subject was discussed in the subject committee also. This subject I have Already taken up in the Petition Committee of which the Hon'ble Deputy Speaker is the Chairman and I have already submitted a petition. These teachers who have been appointed already and approval has been given to their appointment and for which the Hon'ble Chief Minister has committed, not only in Gulbarga Division but also in Bidar and Bijapur in the Janatha Darshan, I request through you, Sir, that the Hon'ble Minister for Primary & Secondary Education should give them the relief by issuing orders which are pending that they should be given and aid so the they can also get the salary to these students. Sir, why this situation regarding education has come? I also want to speak about the standard of education that is prevailing in Government primary schools and secondary schools. While speaking on the debate on Kannada &

Culture, Hon'ble Member my friend, my elder brother Sri Vatal Nagaraj has already explained one or two stories and Mr. Sriramareddy has also said. There was a Swayamvar arranged by Maharaja Dhritharastra. One DDPI went to a school and asked a question to the student who was sitting on the last bench, " Who broke the Dhanush in the Swayamvar?" The student could not answer. We always say, Oh! They are the lords of the Last Benches. So the DDPI thought and asked another boy from the middle bench. He also could not reply. Then he asked the front bench boys. The front bench boys are supposed to be intelligents. They also could not reply. Later on the DDPI asked the teacher, "Who broke the Dhanush in the Swayamvar?" The teacher said, "Sir, there are more than 90 students in this class. I am the only teacher. As per rules there should be 40 students but here there are more than 90. It is very difficult for me to say who has actually broken the Dhanush." Then the DDPI went in anger to the chamber of the Head Master, he called this teacher and all that and said he cannot answer this question. Then the Head Master said, "Sorry Sir, you know in this school there are more than 1000students and there are more than 10 teachers. It is very difficult for me also to know who has broken the Dhanush. Sir, but ultimately do not report to the Commissioner, Whatever losses are there because of the broken Dhanush, you kindly tell us. We can collect and we can give it." This is the type of standard which is now prevailing. I have to quote this just to say how the standard is. We have good schemes but the benefits should reach the student community.

Mr. DEPUTY SPEAKER : Now 20 minutes are over.

Sri QUMURAL ISLAM : Within a few minutes I will finish it. I will not go to other aspects. Sir, one more thing for which you will support me. The entrance examination is going on at the State level basis. There was a demand from the Hyderabad- Karnataka area that it should be at the university basis. This was already initiated during the period of Sri Veerendra Patilji when he was the Chef Minister. The second demand is that the PUC Board should also be at the divisional level. There are Primary and Secondary Boards. That should also be at the divisional level. These are the 3 demands which are there for a very long time. When Sri Veerendra Patilji was the

Chief Minister this was initiated. Afterwards the government was not sincere. Sir, again in the CET Admissions out of 7,000 seats that have been filled, the share which the Hyderabad-Karnataka people are getting is a very meagre share. We wanted that there is no bar as far as the constitution is concerned. This system is already existing in the neighbouring State of Maharastra. So, we wanted that this system is to be adopted. Otherwise this government should also have to face a very big agitation in the near future. Jwala Mukhi which is there beneath the earth may come up. That is why before that Jwala Mukhi comes up, I wanted that the government should very sincerely think of this and see that the PUC Board at the divisional level and the Secondary Board at the divisional level and the Entrance Test at the University-wise are made. Another thing is that there are no government women colleges. I want to bring it to the notice of the Hon. Minister for Collegiate Education that only 2 Women colleges i.e., S.K. Society Women College and another Bandenawas College are there. Both are private colleges. Gulbarga has become the divisional headquarters. No government college is there. People of Gulbarga have collected money. Now the Mini Vidhana Soudha has come there. In that Mini Vidhana Soudha, there is Physics building, there is a chemistry building, there is a botany building. Let the physics building merge with Minix Vidhana Soudha. The chemistry building and the botany and zoology buildings be constructed on the small portion of the land which is already facing towards the District Court and these buidings be constructed with the donation collected by the people of Gulbarga. It is not the government's money. I demand in this House - a very sincere demand on behalf of the ladies and women folk of my Hyderabad- Karnataka area, Gulbarga area. When you have formed the women corporation let us just delcare in this House that without any financial commitment it can be done. You have staff. You have got very big laboratory. Because this laboratory cannot be shifted to the new college.....

Mr. DEPUTY SPEAKER : I will call next speaker.

Sri QUMURUL ISLAM : Within one or two minutes I will finish. I am saying demands. I am not elaborating any other thing. This I wanted from

the Hon.Minister for Education that there should be a government women college in Gulbarga. There will not be any financial commitment. Staff is there. Buildings are there. Laboratories are there. Chemistry laboratory, and zoology laboratory are there with the equipments. This can be started in the next coming years. I am sorry to say one thing. Not only myself, particularly minority legislators want reply. There was a very big announcement and we appreciated it, regarding residential schools. We all appreciated it. This has become an example not only in this state, we thought this will be an example in the country. We have selected the buildings from the government and government was ready to start and everything was there.

The orders issued, and applications were called for and advertisements have been already issued by the government. We came to know that there is an order and by that order the government has dropped that proposal and they have given it to some private managements. Sir, I don't know who has influenced the government. There was an order. Then. Then government has withdrawn their own proposal. The government don't want to run this. Some committees have been formed. The name of Bandenawas have been used. We liked it.. In the name of let the government start. In the name of Tippu Sultan let the government start. We wanted that the Government should start it. Why they have given it to private persons and who are the persons who have influenced the government? Why the government has come under the infuluence? Whether the meeting of the Muslim legislators have been called? No meeting was called. We are not aware of that. But, all of a sudden there is a change. What made the Government to change this order? Sir, this has not give a good signal. You have dropped a very good proposal for which You are getting sympathy throughout the state from the minorities that this government has committed during the Governor's Address and also at the time of the Budge Session. They have provided money more than Rs.1.80 crores. The money has been provided. Circulars have been issued. Order have been issued. All of a sudden the ether orders has come and under that one KGM Trust has been formed. Some 5 committees have been formed. We don't know what is that trust, when this has come into existence, when these committees have been formed. Only an order is there. This is a very wrong signal. We are not happy for that. We have not been explained anything before that. We would have been very happy if the Government or the Hon. Minister for Education would have called all the members irrespective of the

political party and we would have appreciated and said that this is the government which has done something.

Sir, lastly,

Mr. Deputy Speaker : Next Sri Kumaraswamy. Mr. Qumurul Islam, I have called Mr. Kumara Swamy.

Sri Qumural Islam : Within half-a-minute I will finish. Urdu and other minority languages directorate is there. In the subject committee all the matters have been discussed. But. that Directorate matter has not at all been discussed in the report by the subject committee. Whether it is a Directorate or a department, we don't know. There is no typist, no vehicles. It has no powers at all. There is a proposal before the government. If you are really sincere, Minority Directorate was started in 1986 when the Goodwala Commission has submitted the report. Now, you should give teeth. You should give powers to this Directorate so that this directorate can have an administrative power so the there may be a supervision in almost all the linguistic minority institutions, With these few words, I am very much thankful to the Hon. Speaker for having given sufficient time even though there was a very tight schedule. With these words. I conclude my speech.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಉಪಾಧ್ಯಕ್ಷರೆ, ನಾವು ಮಾತನಾಡಬೇಕಾಗಿದೆ. ನಮಗೆ ಅವಕಾಶವಿಲ್ಲವೆಂದರೆ ನಾವು ಇಲ್ಲಿ ಕುಳಿತುಕೊಳ್ಳುವ ಅವಶ್ಯಕತೆ ಇಲ್ಲ. ತಮ್ಮ ತೀರ್ಪಿಗೆ ನಾವು ತಲೆಬಾಗುತ್ತೇವೆ. ನಾವು ಆರು ಜನ ಪಕ್ಷೇತರ ಸದಸ್ಯರಿದ್ದು....

ಉಪಾಧ್ಯಕ್ಷರು : ಅವರು ಮಾತನಾಡಲಿ ಕುಳಿತುಕೊಳ್ಳಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ನನಗೆ ಯಾವಾಗ ಸಮಯ ಕೊಡುತ್ತೀರೆಂದು ಹೇಳಿಬಿಡಿ. ನಾವು ಹೋಗಿ ತಾವು ಹೇಳಿದ ಸಮಯಕ್ಕೆ ಬರುತ್ತೇವೆ.

ಉಪಾಧ್ಯಕ್ಷರು : ಅವರು ಮಾತನಾಡಲಿ ತಾವು ಕುಳಿತುಕೊಳ್ಳಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಮೂರು ದಿವಸದಿಂದ ಕೇಳುತ್ತಿದ್ದೇನೆ. ನಮಗೆ ಸಮಯ ಕೊಡುತ್ತಿಲ್ಲ. ನಮಗೆ ಹಕ್ಕಿಲ್ಲ ಎಂದೆನಿಸುತ್ತಿದೆ. ನಾನು ನಿನ್ನೆ ಮೊನ್ನೆ ಎರಡು ದಿವಸ ಕೇಳಿದ್ದೇನೆ. ತಾವು ನನಗೆ ನ್ಯಾಯ ದೊರಕಿಸಿ ಕೊಡಬೇಕು.

ಉಪಾಧ್ಯಕ್ಷರು : ನಿಮಗೆ ನ್ಯಾಯ ದೊರೆಯುತ್ತದೆ. ಅವರು ಮಾತನಾಡಲಿ ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಮೂರು ದಿವಸಗಳಿಂದ ರೆಡಿಯಾಗಿ ಬಂದಿದ್ದೇನೆ. ಎಲ್ಲಾ ಮರೆತು ಹೋಗುತ್ತಿದೆ ಈ ವಾಸುದೇವನ್ ಗಲಾಟೆಯಲ್ಲಿ, ಇವರ ಗಲಾಟೆಯಲ್ಲಿ. ಏನಿದು? ಇದು ಸರಿಯಲ್ಲ, ತಾವು ದಯವಿಟ್ಟು.....

ಉಪಾಧ್ಯಕ್ಷರು : ಯಾವುದು ಸರಿ ಎನ್ನುವುದು ಬಿಟ್ಟು ಬಿಡ್ರಿ, ಅವರು ಮಾತನಾಡಲಿ ಆ ಮೇಲೆ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ನೀವು ಆಗುವುದಿಲ್ಲವೆಂದು ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ. ಅದು ಬೇರೆ ಪ್ರಶ್ನೆ.

(ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು)

ಶ್ರೀ ಎಲ್.ಆರ್. ಶಿವರಾಮೇಗೌಡ : ಆದರೆ ಇಂತಹ ಅನ್ಯಾಯವಾಗುತ್ತಿದೆಯಲ್ಲ ಅದಕ್ಕಾಗಿ ಕೇಳುತ್ತಿದ್ದೇನೆ ಅಷ್ಟೆ, ಬೇರೆ ಏನೂ ಇಲ್ಲ. ಒಂದೇ ಸಮನೆ ಮೂರು ದಿವಸಗಳಿಂದ ಕೇಳುತ್ತಿದ್ದೇನೆ. ಒಂದು ದಿವಸವೂ ಅವಕಾಶ ಕೊಡುವುದಿಲ್ಲ. ಹಾಗಾದರೆ ನಾವು ಪಕ್ಷೇತರವಾಗಿ ಗೆದ್ದಿದ್ದೇ ಅಪರಾಧ ಎನ್ನುವುದಾದರೆ ಹೇಳಿಬಿಡಿ ನಾವು ಹೋಗುತ್ತೇವೆ.

ಅಧ್ಯಕ್ಷರು : ಶಿವರಾಮೇಗೌಡರಿಗೆ ಅನ್ಯಾಯವಾಗುವುದಿಲ್ಲ. ಕುಮಾರ ಸ್ವಾಮಿಯವರೇ, ನೀವು ಮಾತನಾಡಿ.

3.00 ಪಿ.ಎಂ.

+ ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಬೇಲೂರು) : ಮಾನ್ಯ ಅಧ್ಯಕ್ಷರೇ, ಶಿಕ್ಷಣ ಇಲಾಖೆಯ ಬೇಡಿಕೆಯ ಮೇಲೆ ಈಗಾಗಲೇ ಅನೇಕ ಮಾನ್ಯ ಸದಸ್ಯರು ತಮ್ಮ ವಾದಗಳನ್ನು ಮಂಡಿಸಿದ್ದಾರೆ. ಅವರುಗಳು ಈಗಾಗಲೇ ಹೇಳಿರುವ ವಿಷಯಗಳನ್ನು ಬಿಟ್ಟು ಬೇರೆ ವಿಷಯಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜ್ಯದಲ್ಲಿ ಸುಮಾರು 2500 ಶಾಶ್ವತ ಅನುದಾನ ಪ್ರೌಢ ಶಾಲೆಗಳು ಈಗಾಗಲೇ ಇವೆ. ಈ ಶಾಲೆಗಳನ್ನು ತೆರೆಯುವುದಕ್ಕೆ ಬಂದಂಥ ಸ್ಥಿತಿ ಏನು ಎನ್ನುವುದನ್ನೂ ಕೂಡ ಮಾನ್ಯ ಸರ್ಕಾರದವರು ಯೋಚನೆ ಮಾಡಬೇಕಾಗುತ್ತದೆ. 1987ರಲ್ಲಿ ಮಾನ್ಯ ಸರ್ಕಾರ ಜಿಲ್ಲಾ ಪಂಚಾಯತಿಗೆ ಕೊಟ್ಟಂಥ ಅಧಿಕಾರದ ಮೇರೆಗೆ ಎಲ್ಲಾ 20 ಜಿಲ್ಲೆಗಳಲ್ಲೂ ಇಂಥ ಶಾಲೆಗಳನ್ನು ತೆರೆಯುವುದಕ್ಕೆ ಅವಕಾಶ ಮಾಡಿಕೊಡಲಾಯಿತು. ಇದರಲ್ಲಿ ಸರಿ ಅಥವಾ ತಪ್ಪು ಎಂದು ನೋಡಿದಾಗ, ಒಂದು ವೇಳೆ ಸರ್ಕಾರದವರು ಅನುದಾನ ಕೊಡದಿದ್ದರೂ ಅನುದಾನ ರಹಿತವಾಗಿ ನಾವು ಶಾಲೆಯನ್ನು ತೆರೆಯುತ್ತೇವೆ ಎಂಬ ಷರತ್ತಿನ ಮೇಲೆ ಮತ್ತು ಇದಕ್ಕೆ ಆಡಳಿತ ಮಂಡಳಿಯವರೂ ಕೂಡ ಅಂದು ಒಪ್ಪಿದ್ದು ಉಂಟು. ನನಗನ್ನಿಸುತ್ತದೆ, ಇವರು ಕೇಳಿದ್ದೂ ಕೂಡ ತಪ್ಪು ಮತ್ತು ಆಡಳಿತ ಮಂಡಳಿಯವರು ಅದಕ್ಕೆ ಆ ರೀತಿ ಬರೆದುಕೊಟ್ಟದ್ದೂ ತಪ್ಪು. ಇವೊತ್ತು 2500 ಶಾಲೆಗಳಲ್ಲಿ ಸುಮಾರು 3 ಲಕ್ಷ ಮಕ್ಕಳು ಓದುತ್ತಿದ್ದಾರೆ. ಸುಮಾರು 2500 ಶಿಕ್ಷಕರು ಮತ್ತು ಶಿಕ್ಷಕೇತರ ಸಿಬ್ಬಂದಿ ಇವುಗಳಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ.

ಈ ಶಾಲೆಗಳಿಗೆ ಯಾವ ಸಂದರ್ಭದಲ್ಲಿ ಅವಕಾಶ ಮಾಡಿಕೊಡಲಾಯಿತು ಎಂದರೆ ಯಾವಾಗ ಸರ್ಕಾರ ಸರ್ಕಾರಿ ಶಾಲೆಗಳನ್ನು ನೇರವಾಗಿ ತೆರೆಯುವುದಕ್ಕೆ ಕಷ್ಟವಾಯಿತೋ ಅಂಥ ಸಂದರ್ಭದಲ್ಲಿ ಈ ರೀತಿಯ ಶಾಲೆಗಳನ್ನು ತೆರೆಯಲು ಅವಕಾಶ ಮಾಡಿಕೊಡಲಾಯಿತು. ಆದರೆ ಹಿಂದಿನ ಸರ್ಕಾರದ ಮತ್ತು ಈಗಿನ ಸರ್ಕಾರದ ನಿಲುವು ಹೇಗಿದೆಯೆಂದರೆ, ಯಾವುದೇ ಕಾರಣಕ್ಕೂ ಕೂಡ ಇಂಥ ಶಾಲೆಗಳಿಗೆ ಅನುದಾನವನ್ನು ಕೊಡಲಿಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥ ರೀತಿಯಲ್ಲಿದೆ. ನಾನು ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತಿದ್ದೇನೆ, ಈ ಶಾಲೆಗಳಲ್ಲಿ ಇರತಕ್ಕಂಥ ಮಕ್ಕಳ ಸಂಖ್ಯೆ, ಶಾಲೆಯನ್ನು ನಡೆಸುತ್ತಿರತಕ್ಕಂಥ ನಿರುದ್ಯೋಗಿಗಳ ಸಂಖ್ಯೆ, ಇವೆಲ್ಲದರ ಜೊತೆಗೆ ಈಗಾಗಲೇ 3 ಲಕ್ಷ ಮಕ್ಕಳು ಓದುತ್ತಿರತಕ್ಕಂಥ ಶಾಲೆಗಳನ್ನು ಮುಚ್ಚಿದ್ದೇ ಆದರೆ, ರದ್ದು ಮಾಡಿದ್ದೇ ಆದರೆ ಈ ಶಾಲೆಗಳಲ್ಲಿ ಓದುತ್ತಿರುವ 3 ಲಕ್ಷ ಮಕ್ಕಳಿಗೆ ಬದಲಿ ವ್ಯವಸ್ಥೆ ಏನು ಮಾಡಬಲ್ಲೆವು ಎನ್ನತಕ್ಕಂಥದ್ದನ್ನೂ ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. ಅಂಕಿ ಅಂಶಗಳ ಪ್ರಕಾರ ಸುಮಾರು 20 ವರ್ಷಗಳ ಹಿಂದೆಯೇ

ಅನುದಾನವನ್ನು ಕೊಟ್ಟು ನಡೆಸುತ್ತಿರುವ ಶಾಲೆಗಳು ಇವೊತ್ತಿನ ದಿನಗಳಲ್ಲಿ ಆ ಶಾಲೆಗಳು ಅನುದಾನ ಸಂಹಿತೆಯ ರೀತಿಯಲ್ಲಿ ನಡೆಯುತ್ತಿಲ್ಲ. ನಮ್ಮ ಅಧಿಕಾರಿಗಳು ಆ ಶಾಲೆಗಳ ಬಗ್ಗೆ ಯಾವ ರೀತಿ ವರದಿಯನ್ನು ಕೊಡುತ್ತಾರೋ ನನಗೆ ಗೊತ್ತಿಲ್ಲ. ಇವೊತ್ತು ಸರಿಯಾದ ಕಟ್ಟಡವಿಲ್ಲ, ಸರಿಯಾದ ಸಿಬ್ಬಂದಿಗಳು ಇಲ್ಲ, ಈ ರೀತಿ ಇದ್ದರೂ ಕೂಡ ಆ ಶಾಲೆಗಳಿಗೆ ಅನುದಾನ ದೊರೆತಿದೆ. ಆದರೆ ಈಗಿರುವ ಅನುದಾನ ರಹಿತ ಶಾಲೆಗಳ ಕೆಲವು ಶಾಲೆಗಳವರು ಉತ್ತಮ ಕಟ್ಟಡವನ್ನು ಕಟ್ಟಿದ್ದಾರೆ, ರೋಸ್ಟರ್ ಪದ್ಧತಿಯಲ್ಲಿ ಸಿಬ್ಬಂದಿಯನ್ನು ನೇಮಕಾತಿ ಮಾಡಿಕೊಂಡಿದ್ದಾರೆ, ಬಹಳ ಮಾದರಿಯಾಗಿ ನಡೆಸುತ್ತಿದ್ದಾರೆ, ಈ ಶಾಲೆಗಳ ಆಡಳಿತ ಮಂಡಳಿಯವರೂ ಆರ್ಥಿಕವಾಗಿ ಸಂಕಷ್ಟ ಪರಿಸ್ಥಿತಿಯಲ್ಲಿದ್ದಾರೆ.

ಆದ್ದರಿಂದ ಶಾಲೆಗಳನ್ನು ಹೇಗೆ ನಡೆಸಬೇಕು ಎನ್ನುವ ಪ್ರಶ್ನೆ ಇಲ್ಲಿ ಉದ್ಭವವಾಗುತ್ತದೆ. ದಯಮಾಡಿ ಸರ್ಕಾರದವರು ಇವುಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡು ಯಾವ ಶಾಲೆಗಳವರು ಅನುದಾನರಹಿತವಾಗಿದ್ದರೂ ಕೂಡ ಅನುದಾನ ಸಂಹಿತೆಯ ಪ್ರಕಾರದಲ್ಲಿ ಶಾಲೆಗಳನ್ನು ನಡೆಸುತ್ತಿದ್ದಾರೆ ಮತ್ತು ರೋಸ್ಟರ್ ಪದ್ಧತಿಯನ್ನು ಸರಿಯಾಗಿ ಅನುಸರಿಸುತ್ತಿದ್ದಾರೆ, ಉತ್ತಮ ಕಟ್ಟಡವನ್ನು ಯಾರು ಹೊಂದಿದ್ದಾರೆ ಇವುಗಳನ್ನು ನೋಡಿಕೊಂಡು ಅಂಥ ಶಾಲೆಗಳವರಿಗಾದರೂ ಕೂಡ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರ ಪ್ರಯತ್ನವನ್ನು ಮಾಡಬೇಕು. ಇದರ ಜೊತೆಗೆ ಇವೊತ್ತು ಅನುದಾನ ಶಾಲೆಗಳಲ್ಲಿ ಬಹಳ ದುರಂತದ ಸಂಗತಿಯೆಂದರೆ ಆಂಗ್ಲ ಮಾಧ್ಯಮ ಮತ್ತು ಕನ್ನಡ ಮಾಧ್ಯಮ ಶಾಲೆಗಳ ಆಡಳಿತ ಮಂಡಳಿಯವರು ಹೇಗೆ ವರ್ತಿಸುತ್ತಿದ್ದಾರೆ ಈ ಶಾಲೆಗಳಲ್ಲಿ ಬಡವರ ಮಕ್ಕಳಿಗೆ ಪ್ರವೇಶವಿಲ್ಲದ ರೀತಿಯಲ್ಲಿ ಶಾಲೆಗಳನ್ನು ನಡೆಸುತ್ತಿದ್ದಾರೆ. ಇಂಥ ಅನುದಾನ ಶಾಲೆಗಳವರೂ ಕೂಡ ಡೊನೇಷನ್ ತೆಗೆದುಕೊಳ್ಳುತ್ತಿದ್ದಾರೆ. ಆದ್ದರಿಂದ ನಾನು ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ, ಉನ್ನತ ಶಿಕ್ಷಣದ ಮಟ್ಟದಲ್ಲಿ ಅಂದರೆ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜ್‌ಗಳಲ್ಲಿ ಯಾವ ರೀತಿ ನ್ಯಾಯಾಲಯದ ಆದೇಶದ ಮೇರೆಗೆ ತಾವು ಮಾಡುತ್ತಿದ್ದಿರೋ ಅದೇ ರೀತಿಯಲ್ಲಿ ಖಾಸಗಿ ಪ್ರೈಮರಿ ಸ್ಕೂಲ್ ಇರಬಹುದು, ಪ್ರೌಢ ಶಾಲೆಗಳಿರಬಹುದು, ಇಂಥ ಶಾಲೆಗಳಿಗೂ ಕೂಡ ಜಿಲ್ಲಾ ಮಟ್ಟದಲ್ಲಿ ಅರ್ಜಿಯನ್ನು ಕರೆಯಬೇಕು. ಎಲ್ಲಾ ವರ್ಗದ ಬಡ ಮಕ್ಕಳಿಗೂ ಅಲ್ಲಿ ಸೀಟ್ ದೊರಕುವಂತಿರಬೇಕು. ಇವೊತ್ತಿಗೂ ನಾವು ಪದವಿಪೂರ್ವ ಕಾಲೇಜ್‌ಗಳಿಗೆ, ಪ್ರೌಢ ಶಾಲೆಗಳಿಗೆ ಅನುದಾನವನ್ನು ಕೊಡುತ್ತಿದ್ದರೂ ಕೂಡ ಪರಿಶಿಷ್ಟ ಜಾತಿ ಪಂಗಡಗಳವರಿಗೆ, ಅಲ್ಪ ಸಂಖ್ಯಾತರಿಗೆ, ಉನ್ನತ ವರ್ಗದ ಬಡ ಮಕ್ಕಳಿಗೂ ಕೂಡ ಅಲ್ಲಿ ಪ್ರವೇಶವನ್ನು ಕೊಡುತ್ತಿಲ್ಲ. ಇದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಮುಂದಿನ ಸಾಲಿನಿಂದಲಾದರೂ ಅವರಿಗೆ ಒಂದು ನಿರ್ದೇಶನವನ್ನು ಕೊಟ್ಟು ಯಾವುದೇ ಪ್ರವೇಶ ಮಾಡಿಕೊಳ್ಳುವಾಗ ಮಕ್ಕಳ ಪೋಷಕರು ಒಂದು ಅರ್ಜಿಯನ್ನು ಡಿ.ಡಿ.ಪಿ.ಐ. ಅವರಿಗೆ ಅಥವಾ ಸಂಬಂಧಪಟ್ಟಂಥ ವಿದ್ಯಾಧಿಕಾರಿಗಳಿಗೆ ಹಾಕಿ ಪ್ರವೇಶವನ್ನು ಕೊಡಬೇಕು ಎಂದು ಸೂಚಿಸಬೇಕು. ಇಂದಿನ ದಿನಗಳಲ್ಲಿ ಅನೇಕ ವಿಷಯಗಳಲ್ಲಿ ಆಡಳಿತ ಮಂಡಳಿಯನ್ನು ಚುರುಕು ಮಾಡಬೇಕಾದ ಅವಶ್ಯಕತೆ ಇದೆ. ಯಾರೇ ವ್ಯಕ್ತಿ ಶಿಫಾರಸ್ಸು ಇಲ್ಲದೇ ವಿದ್ಯಾ ಇಲಾಖೆಯ ಕಛೇರಿಗೆ ಅರ್ಜಿಯನ್ನು ತೆಗೆದುಕೊಂಡು ಹೋದರೆ ಆ ಅರ್ಜಿಯ ಬಗ್ಗೆ ಆದಷ್ಟು ಬೇಗ ತೀರ್ಮಾನ ಮಾಡತಕ್ಕಂಥ ಪದ್ಧತಿ ಬರಬೇಕೆಂದು ಹೇಳುತ್ತೇನೆ. ಇನ್ನು ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲು ಇಚ್ಛೆಪಡುತ್ತೇನೆ. ನಮ್ಮ ಸರ್ಕಾರ ಸುಮಾರು 539 ಕೋಟಿ ರೂಪಾಯಿಗಳನ್ನು ಈ ವರ್ಷಕ್ಕೆ ಸಮಾಜ ಕಲ್ಯಾಣ ಇಲಾಖೆಗೆ ಇಟ್ಟಿದೆ. ಕಳೆದ ವರ್ಷಕ್ಕೆ ಹೋಲಿಕೆ ಮಾಡಿಕೊಂಡರೆ ಈ ವರ್ಷಕ್ಕೆ ನಮ್ಮ ಸರ್ಕಾರ ಅಂತ್ಯ ಹೆಚ್ಚಿನ ಹಣವನ್ನು ಇಟ್ಟಿದೆ. ಇದನ್ನು ಮೆಚ್ಚಬೇಕಾದಂಥ ಸಂಗತಿ. ಆದರೆ ಈ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡುವುದಕ್ಕೆ, ಸರ್ಕಾರ ಹಾಕಿಕೊಂಡಿರತಕ್ಕಂಥ ಅನೇಕ ಉತ್ತಮ ಯೋಜನೆಗಳನ್ನು

ಜಾರಿ ಮಾಡುವುದಕ್ಕೆ ನಮ್ಮಲ್ಲಿ ಸರಿಯಾದ ಸಿಬ್ಬಂದಿವರ್ಗದವರು ಇಲ್ಲ. ಇವೊತ್ತು 175 ತಾಲ್ಲೂಕುಗಳಲ್ಲಿ ಕೇವಲ 42 ತಾಲ್ಲೂಕುಗಳಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳು ಇದ್ದಾರೆ.

ಇನ್ನುಳಿದ 133 ತಾಲ್ಲೂಕುಗಳಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳು ಇಲ್ಲ. ಕೇವಲ ಪ್ರತಿ ತಾಲ್ಲೂಕಿನಲ್ಲಿ ಒಬ್ಬ ಇನ್ಸ್‌ಪೆಕ್ಟರ್ ಇರುತ್ತಾರೆ. ಇವೊತ್ತು ನಾವು ವಿಶೇಷ ಘಟಕ ಯೋಜನೆಯಲ್ಲಿ ಎಸ್‌ಸಿಪಿ ಸ್ಕೀಮ್‌ಗೆ 300 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಉಳಿದಂಥ ಹಾಸ್ಟೆಲ್‌ಗಳನ್ನು ನೋಡಿಕೊಳ್ಳತಕ್ಕಂಥದ್ದು ಇರಬಹುದು, ಉಳಿದಂಥ ಆಡಳಿತಕ್ಕೆ ಸುಮಾರು 190 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಆದರೆ ಇಂಥ ಅಗಾಧವಾದಂಥ ಇಲಾಖೆಗೆ ಒಂದು ಸ್ವತಂತ್ರವಾದಂಥ ಅಧಿಕಾರಿ ತಾಲ್ಲೂಕು ಮಟ್ಟದಲ್ಲಿ ಇಲ್ಲದೇ ಇರತಕ್ಕಂಥದ್ದು ತುಂಬ ದುರದೃಷ್ಟ, ಇದನ್ನು ನಾನು ಒಂದು ರೀತಿಯಲ್ಲಿ ತಬ್ಬಲಿ ಇಲಾಖೆ ಎಂದು ಕರೆಯುತ್ತೇನೆ. ಇವೊತ್ತು ಮೀನುಗಾರಿಕೆ ಇಲಾಖೆಗೆ, ರೇಷ್ಮೆ ಇಲಾಖೆಗೆ, ಸಹಕಾರ ಇಲಾಖೆಗೆ ಪ್ರತಿ ಇಲಾಖೆಯಲ್ಲೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಇದ್ದಾರೆ. ಆದರೆ ಇಂಥ ಒಂದು ಮಹತ್ವವಾದ ಇಲಾಖೆಯಲ್ಲಿ ತಾಲ್ಲೂಕು ಮಟ್ಟದಲ್ಲಿ ಅಧಿಕಾರಿ ಇಲ್ಲದೇ ಯಾವುದೇ ಯೋಜನೆಗಳು ಸರಿಯಾಗಿ ಕಾರ್ಯಗತವಾಗುತ್ತಿಲ್ಲ, ಸರ್ಕಾರಕ್ಕೆ ಈ ವರ್ಗಗಳ ಏಳಿಗೆ ಬಗ್ಗೆ ಆಸಕ್ತಿ ಇದ್ದರೂ ಕೂಡ ಅಧಿಕಾರಿಗಳು ಇಲ್ಲಿ ಇಲ್ಲದೇ ಇರುವುದರಿಂದ ಕೆಲಸ ಕಾರ್ಯಗಳು ಕುಂಠಿತವಾಗುತ್ತದೆ. ಸರ್ಕಾರಕ್ಕೆ ಎಷ್ಟೇ ಕಷ್ಟವಾದರೂ ಕೂಡ, ನನಗನ್ನಿಸುತ್ತದೆ ವಾರ್ಷಿಕವಾಗಿ ಸುಮಾರು ಮೂರರಿಂದ ನಾಲ್ಕು ಕೋಟಿ ರೂಪಾಯಿಗಳು ಖರ್ಚು ಬರಬಹುದು, ಆ ಖರ್ಚು ಏನೇ ಇದ್ದರೂ ಕೂಡ ಈ ಇಲಾಖೆಯನ್ನು ಪುನರ್ ರಚನೆ ಮಾಡಬೇಕು. ಈ ರೀತಿ ಮಾಡಿ ತಾಲ್ಲೂಕು ಮಟ್ಟದಲ್ಲಿ ಅಧಿಕಾರಿಗಳು ಇರುವ ಹಾಗೆ ನೋಡಿಕೊಳ್ಳಬೇಕು. ಇವೊತ್ತು ವಿಶೇಷ ಘಟಕ ಯೋಜನೆಯನ್ನು ಸುಮಾರು 20-22 ಇಲಾಖೆಗಳವರು ಜಾರಿ ಮಾಡುತ್ತಾರೆ.

ನಾವು ಇವೊತ್ತು ಕೆ.ಡಿ.ಪಿ. ಮೀಟಿಂಗ್‌ಗಳಲ್ಲಿಯೇ ಆಗಲಿ ಮತ್ತೊಂದು ಮೀಟಿಂಗ್‌ಗಳಲ್ಲಿಯೇ ಆಗಲಿ ಎಲ್ಲಾ ಅಧಿಕಾರಿಗಳನ್ನು ಕೇಳಬೇಕು. ಆದರೆ ಯಾವುದೇ ಅಧಿಕಾರಿಗೆ ನಿರ್ದಿಷ್ಟವಾದಂಥ ಜವಾಬ್ದಾರಿ ಇಲ್ಲ. ಆದ್ದರಿಂದ ಒಬ್ಬ ಅಧಿಕಾರಿಗೆ ಸಿಬ್ಬಂದಿಗೆ ಈ ಎಲ್ಲಾ ಕೆಲಸಗಳನ್ನು ವಹಿಸಿದರೆ ಅವುಗಳು ಚೆನ್ನಾಗಿ ಕಾರ್ಯಗತವಾಗುತ್ತದೆ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದರ ಜೊತೆಗೆ ಹಾಸನದಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಇನ್ನೂ ಕೂಡ ಸ್ವಂತವಾದ ಒಂದು ಕಟ್ಟಡವಿಲ್ಲ. ಮೊದಲು ಈ ಕಛೇರಿ ಕೆಲಸ ಕಾರ್ಯಗಳು ಜಿಲ್ಲಾ ಪಂಚಾಯತಿ ಬರುವುದಕ್ಕಿಂತ ಮುಂಚೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆಯುತ್ತಿತ್ತು. ನನಗೆ ಬಹುಶಃ ಯಾವ ಕಾರಣಕ್ಕಾಗಿ ಇದನ್ನು ಬೇರೆ ಮಾಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಇವೊತ್ತು ಪರಿಶಿಷ್ಟ ಪಂಗಡಗಳವರು ಯಾರಾದರೂ ಬಂದರೆ ಬಸ್‌ಸ್ಟಾಂಡಿನಲ್ಲಿ ಇಳಿದು ಅಲ್ಲಿಂದ ಬಹಳ ದೂರ ನಡೆದುಕೊಂಡು ಬರಬೇಕಾದ ಪರಿಸ್ಥಿತಿ ಇದೆ; ಇದಲ್ಲದೇ ಈ ಕಛೇರಿಯ ವಿಳಾಸವೂ ಕೂಡ ಸುಲಭವಾಗಿ ಹುಡುಕಲು ಆಗದೇ ಇರುವ ರೀತಿಯಲ್ಲಿದೆ. ಇದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಆ ಕಛೇರಿಯನ್ನು ಪುನಃ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ತೆರೆಯತಕ್ಕಂಥ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇವೊತ್ತು ಬಹಳ ಮೆಚ್ಚಬೇಕಾದ ಸಂಗತಿಯೆಂದರೆ, ಸರ್ಕಾರ ಈ ವರ್ಷ 159 ಪ್ರಿ-ಮೆಟ್ರಿಕ್ ಹಾಸ್ಟೆಲ್‌ಗಳನ್ನು ತೆರೆಯುತ್ತಿದೆ. ಈ ಹಿಂದೆ ಇದ್ದ ಕಾಂಗ್ರೆಸ್ ಸರ್ಕಾರ 1994-95ನೇ ಸಾಲಿನಲ್ಲಿ 79 ಹಾಸ್ಟೆಲ್‌ಗಳನ್ನು ತೆರೆಯುತ್ತೇವೆ ಎಂದು ವಾಗ್ದಾನ ಮಾಡಿತ್ತು.

ಆದರೆ ಆ ವಾಗ್ದಾನ ಕೇವಲ ವಾಗ್ದಾನವಾಗಿಯೇ ಘೋಷಣೆಯಾಗಿಯೇ ಉಳಿಯಿತು. ಇವೊತ್ತು ಜನತಾ ದಳ ಸರ್ಕಾರ ಬಂದಿದ್ದು, ಇವರೂ ಕೂಡ 80 ಹಾಸ್ಟೆಲ್‌ಗಳನ್ನು

ತೆರೆಯುತ್ತೇವೆ ಅಲ್ಲದೇ ಹಿಂದಿನ ಸರ್ಕಾರ ಘೋಷಣೆ ಮಾಡಿದ್ದ 79 ಹಾಸ್ಟೆಲ್‌ಗಳನ್ನೂ ಒಟ್ಟಾರೆ 159 ಹಾಸ್ಟೆಲ್‌ಗಳನ್ನು ನಾವು ಈ ವರ್ಷ ಪ್ರಾರಂಭ ಮಾಡುತ್ತಿದ್ದೇವೆ ಎಂದಿದ್ದಾರೆ. ಇದರ ಜೊತೆಗೆ 200 ಕ್ಕಿಂತಲೂ ಹೆಚ್ಚು ಕಟ್ಟಡಗಳನ್ನು ಕಟ್ಟುವ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ ಎಂದಿದ್ದಾರೆ. ಇದು ಬಹಳ ಮೆಚ್ಚತಕ್ಕಂಥ ಸಂಗತಿಯಾಗಿದೆ. ಇವೆಲ್ಲದರ ಜೊತೆಗೆ ಇನ್ನೂ ಹಲವಾರು ಸುಧಾರಣೆಗಳಾಗಬೇಕಾದ ಪರಿಸ್ಥಿತಿ ಇಲಾಖೆಯ ಮಟ್ಟದಲ್ಲಿದೆ. ಇನ್ನೂ ಕೂಡ ಸ್ಕಾಲರ್‌ಶಿಪ್ ಕೊಡುವ ವಿಚಾರದಲ್ಲಿ ನಾಲ್ಕನೇ ದರ್ಜೆಯ ನೌಕರರ ಮಕ್ಕಳಿಗೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳವರ ಮಕ್ಕಳಿಗೆ ಈ ಸೌಲಭ್ಯ ದೊರಕದೇ ಇರುವ ಪರಿಸ್ಥಿತಿ ಇನ್ನೂ ಕೂಡ ಇದೆ. ಈ ವರ್ಗದವರಿಗೆ 24 ಸಾವಿರ ರೂಪಾಯಿಗಳ ಆದಾಯದ ಮಿತಿಯನ್ನು ಮಾಡಿದ್ದಾರೆ. ಆದರೆ ಬೇರೆ ಹಿಂದುಳಿದ ವರ್ಗದವರಿಗೆ ಇದನ್ನು ಮಾಡಿಲ್ಲ. ದಯಮಾಡಿ ಈ ಆದಾಯದ ಮಿತಿಯನ್ನು ಸ್ಕಾಲರ್‌ಶಿಪ್ ಕೊಡುವ ವಿಚಾರದಲ್ಲಿ ರದ್ದು ಮಾಡಬೇಕೆಂದು ತಮ್ಮಲ್ಲಿ ಕೇಳುತ್ತಿದ್ದೇನೆ. ಇನ್ನು ದಲಿತರ ಆರ್ಥಿಕ ಜೀವನವನ್ನು ಸುಧಾರಣೆ ಮಾಡತಕ್ಕಂಥ ವಿಚಾರದಲ್ಲಿ ಅವರ ಜಮೀನಿಗೆ ಕೊಳವೆ ಬಾವಿಗಳ ಮೂಲಕ ನೀರನ್ನು ಕೊಡತಕ್ಕಂಥ ಯೋಜನೆ ಏನಿದೆ ಒಂದು ಮುಖ್ಯ ಕಾರಣದಿಂದ ಆ ಕೆಲಸ ಸಂಪೂರ್ಣವಾಗಿ ಸ್ಥಗಿತವಾಗಿದೆ.

ಇದು ಸರಿಯಾಗಿ ಕೆಲಸ ಆಗುತ್ತಿಲ್ಲ. ಇವೊತ್ತು ಏನು ನೋ ವಾಟರ್ ನೋ ಮನಿ ಸ್ಕೀಮ್ ಇದೆ ಅದನ್ನು ರದ್ದು ಮಾಡಬೇಕು. ಇವೊತ್ತು ಈ ಒಂದು ಕಾರಣದಿಂದ ಯಾವುದೇ ಏಜೆನ್ಸಿಗಳವರು ಮುಂದೆ ಬರುತ್ತಿಲ್ಲ, ಯಾವುದೇ ಜಿಲ್ಲೆಯಲ್ಲಿ, ಯಾವುದೇ ತಾಲ್ಲೂಕಿನಲ್ಲಿ ಯಾವುದೇ ಕೆಲಸಗಳೂ ಆಗುತ್ತಿಲ್ಲ. ಹಾಗಾಗಿ ಆರ್ಥಿಕ ಪ್ರಗತಿ ತುಂಬಾ ಕುಂಠಿತಗೊಂಡಿದೆ ಎಂಬುದನ್ನು ಮಾನ್ಯ ಸರ್ಕಾರ ಗಮನಿಸಬೇಕು. ಅದನ್ನು ಕೂಡ ಸರ್ಕಾರ ತೆಗೆಯಬೇಕು ಎಂದು ಹೇಳುತ್ತೇನೆ. ಇನ್ನು ತಮಿಳುನಾಡು ಸರ್ಕಾರ ಒಂದು ಹೊಸ ಯೋಜನೆಯೊಂದನ್ನು ಮಾಡಿದೆ. ಈ ಯೋಜನೆಯ ಪ್ರಕಾರ ಯಾರಿಗೆ ವಾಹನಗಳನ್ನು ಅಂದರೆ ಟ್ಯಾಕ್ಸಿ, ಲಾರಿ ಇಂಥ ವೈಟ್ ಬೋರ್ಡ್ ವಾಹನಗಳಿಗೆ ಸಾಲವನ್ನು ಕೊಡುತ್ತಾರೆ, ಈ ಸಾಲಕ್ಕೆ ಶೇಕಡ 15 ರಷ್ಟನ್ನು ಸಬ್ಸಿಡಿಯನ್ನು ಕೊಡುತ್ತಿದ್ದಾರೆ. ಇದನ್ನು ನಮ್ಮ ಕರ್ನಾಟಕ ಸರ್ಕಾರದಲ್ಲೂ ಮಾಡಬೇಕೆಂದು ನಾನು ಹೇಳುತ್ತೇನೆ. ಇದರ ಜೊತೆಗೆ ಹಾಸ್ಟೆಲ್‌ಗಳಿಗೆ ಅನುದಾನವನ್ನು ಮೂರನೇ ವರ್ಷದಲ್ಲಿ ಕೊಡತಕ್ಕಂಥ ವ್ಯವಸ್ಥೆ ಈಗ ಇದೆ. ಇದನ್ನು ಮೊದಲನೇ ವರ್ಷದಲ್ಲಿಯೇ ಕೊಡಬೇಕೆಂದು ಮಾನ್ಯ ಸರ್ಕಾರಕ್ಕೆ ನಾನು ಕೇಳಿಕೊಳ್ಳುತ್ತೇನೆ.

ಇನ್ನು ಎಲ್ಲಕ್ಕಿಂತ ಹೆಚ್ಚಾಗಿ ಹೇಳುವುದಾದರೆ, ಎಲ್ಲಾ ಇಲಾಖೆಗಳಿಗೆ ಹೊಂದಿಕೊಂಡಿರುವಂಥಾದ್ದು ಎಂದರೆ ಸಿ.ಆರ್.ಇ.ಸೆಲ್. ಈ ನಾಗರೀಕ ಹಕ್ಕು ಸಂರಕ್ಷಣಾ ವಿಭಾಗಕ್ಕೆ ಅನೇಕ ರೀತಿಯ ದೂರುಗಳು ಪ್ರತಿನಿತ್ಯ ಬರುತ್ತಿವೆ. ಆದರೆ ನಾವು ತೆಗೆದುಕೊಳ್ಳತಕ್ಕ ಕ್ರಮದ ವಿಳಂಬದಿಂದಾಗಿ ಅನ್ಯಾಯಗಳು ಅನ್ಯಾಯವಾಗಿಯೇ ಮುಂದುವರೆಯುತ್ತಿವೆ. ನಮ್ಮ ಅಧಿಕಾರಿಗಳು ಈ ವಿಚಾರದಲ್ಲಿ ಚುರುಕಾಗಬೇಕಾಗಿದೆ. ಇವತ್ತು ಪತ್ರಿಕೆಗಳಲ್ಲಿ ಅನೇಕ ವರದಿಗಳು ಬರುತ್ತಿವೆ, ನೇರವಾಗಿ ಅನೇಕ ಅರ್ಜಿಗಳು ಬರುತ್ತಿವೆ. ನಾನು ನಮ್ಮ ವಿಧಾನ ಮಂಡಲದ ಪರಿಶಿಷ್ಠ ಜಾತಿ ಮತ್ತು ವರ್ಗಗಳ ಸಮಿತಿಯ ಅಧ್ಯಕ್ಷನಾಗಿದ್ದೇನೆ. ನನಗೆ ಪ್ರತಿದಿನ ಅಂದರೆ ಸುಮಾರು 40-50 ಅರ್ಜಿಗಳು ಕಳೆದ 7 ತಿಂಗಳಲ್ಲಿ ಬಂದಿವೆ. ಜಾತಿಯ ಸುಳ್ಳು ಪ್ರಮಾಣ ಪತ್ರಗಳ ಬಗ್ಗೆ ದೂರುಗಳು ಬಂದಿವೆ. ಪ್ರೊಮೋಷನ್ ಕೊಡದೆ ಅನ್ಯಾಯವಾಗಿರುವ ಬಗ್ಗೆ ದೂರುಗಳು ಬಂದಿವೆ. ಈ ವಿಚಾರವನ್ನು ಮಾನ್ಯ ಸಚಿವರಾದ ಮಂಜುನಾಥ್‌ರವರಿಗೆ ಹೇಳಬೇಕೆಂದಿದ್ದೆ. ನನಗೆ ತಿಳಿದಮಟ್ಟಿಗೆ, ಪ್ರಮೋಷನ್ ಬಗ್ಗೆ ಆದೇಶವಿದ್ದರೂ ಸಹ ಎಲ್ಲ ಖಾಸಗಿ ಶಾಲಾ ಕಾಲೇಜುಗಳಲ್ಲೂ ಸರ್ಕಾರದ ಆದೇಶವನ್ನು ಪಾಲಿಸುತ್ತಿಲ್ಲ.

ಸರ್ಕಾರ ಇದರ ಬಗ್ಗೆ ತೀವ್ರವಾಗಿ ಪರಿಶೀಲಿಸಿ ಸರ್ಕಾರದ ಆಜ್ಞೆಯನ್ನು ಪಾಲಿಸದೇ ಇರುವವರನ್ನು ಶಿಕ್ಷೆಗೆ ಒಳಪಡಿಸಬೇಕು. ಇಲ್ಲದೇ ಹೋದರೆ ಯಾರೂ ಕೂಡ ಹೆದರುವುದಿಲ್ಲ, ಇವತ್ತು ನಮ್ಮ ಕರ್ನಾಟಕದಲ್ಲಿರತಕ್ಕ ಸಾವಿರಾರು ಖಾಸಗಿ ಶಾಲಾ ಕಾಲೇಜುಗಳಲ್ಲಿ ಉಪಾಧ್ಯಾಯರ ಹುದ್ದೆಗಳಿರಬಹುದು, ಮುಖ್ಯೋಪಾಧ್ಯಾಯರ ಹುದ್ದೆಗಳು ಇರಬಹುದು, ಯಾರಿಗೆ ಬಡ್ತಿ ಸಿಕ್ಕುವುದರಲ್ಲಿ ಅನ್ಯಾಯವಾಗಿದೆ ಅವರೆಲ್ಲರೂ ನಮಗೆ ಅರ್ಜಿ ಸಲ್ಲಿಸಿದ್ದಾರೆ. ಅನೇಕ ರೀತಿಯ ಹೋರಾಟ ಮಾಡಿದ್ದಾರೆ. ಇದನ್ನು ಸರ್ಕಾರ ಗಮನಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಸುಳ್ಳು ಜಾತಿ ಪತ್ರವನ್ನು ಕೊಡುವುದರಲ್ಲಿ ಬಹುಶಃ ಅಧಿಕಾರಿಗಳೂ ಕೂಡ ಶಾಮೀಲಾಗುತ್ತಿದ್ದಾರೆ ಎನಿಸುತ್ತದೆ. ಅವರು ಶಾಮೀಲಾಗದಿದ್ದರೆ ಅಷ್ಟು ಸುಲಭವಾಗಿ ಸುಳ್ಳು ಜಾತಿ ಪತ್ರ ಕೊಡುವುದಕ್ಕೆ ಆಗುವುದಿಲ್ಲ. ಸುಳ್ಳು ಜಾತಿಪತ್ರವನ್ನು ತೆಗೆದುಕೊಂಡ ವ್ಯಕ್ತಿಗೆ ಶಿಕ್ಷೆ ಕೊಡುವುದರ ಜೊತೆಗೆ ಅದನ್ನು ಕೊಟ್ಟಂಥ ಅಧಿಕಾರಿಗೂ ಶಿಕ್ಷೆ ಕೊಡಬೇಕು. ಜಾತಿ ಪತ್ರವನ್ನು ಕೊಡುವುದಕ್ಕೆ ಮುಂಚೆ ಸಂಬಂಧಪಟ್ಟ ಅಧಿಕಾರಿ ಅಭ್ಯರ್ಥಿ ವಾಸವಾಗಿರುವ ಸ್ಥಳಕ್ಕೆ ಹೋಗಿ ಆತನ ಪೂರ್ವಾಪರ ತಿಳಿದು ಕೊಂಡು ಕೊಟ್ಟರೆ ಇಂಥಾದ್ದನ್ನು ತಪ್ಪಿಸಹುದೆಂದು ಹೇಳಬಯಸುತ್ತೇನೆ.

ಇನ್ನು ಆಶ್ರಯ ಮನೆಗಳ ಬಗ್ಗೆ ಹೇಳುವುದಾದರೆ, ಅಂಬೇಡ್ಕರ್ ಯೋಜನೆಯಡಿಯಲ್ಲಿ ಸುಮಾರು ಒಂದು ಲಕ್ಷ ಮನೆಗಳನ್ನು ಕಟ್ಟುವಂಥ ಯೋಜನೆಯನ್ನು 1992ರಲ್ಲಿ ಸರ್ಕಾರ ಹಾಕಿಕೊಂಡಿತು. ದುರಾದೃಷ್ಟದಿಂದ ಕಳೆದ 3 ವರ್ಷಗಳಿಂದ ಕೇವಲ 25 ಸಾವಿರ ಮನೆಗಳನ್ನೂ ಕೂಡ ಪೂರ್ಣಗೊಳಿಸುವುದಕ್ಕಾಗದೆ ವಿಫಲರಾಗಿದ್ದೇವೆಂದು ಈ ಸರ್ಕಾರ ಮತ್ತು ಇಲಾಖೆ ಯಾವ ರೀತಿಯ ಕೆಲಸವನ್ನು ಮಾಡಿದೆ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಆದಷ್ಟು ಬೇಗ ಈ ಕೆಲಸವನ್ನು ಮಾಡಿ ಮುಗಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ದುರಾದೃಷ್ಟದಿಂದ ಈ ಸಮಾಜದಲ್ಲಿ ಅಸ್ಪೃಶ್ಯತೆ, ದೌರ್ಜನ್ಯಗಳು ಕಾಣದ ರೀತಿಯಲ್ಲಿ ಕಾಣದ ಕೈ ಆಗಿ ಕೆಲಸ ಮಾಡುತ್ತಿವೆ ಎನಿಸುತ್ತದೆ. ಸಾಕಷ್ಟು ಪ್ರಮಾಣದಲ್ಲಿ ಅಸ್ಪೃಶ್ಯತೆ ಇಲ್ಲದಿದ್ದರೂ ಕೂಡ ಕಾಣದ ಕೈ ಆಗಿ ಅದು ಕೆಲಸ ಮಾಡುತ್ತಿದೆ. ಮನಸ್ಸಿನಲ್ಲಿ ಈ ಅಸ್ಪೃಶ್ಯತಾ ಭಾವನೆ ಇದೆ, ಆದರೆ ಅದು ಕಾರ್ಯತಃ ಕಾಣುತ್ತಿಲ್ಲ. ಇದು ಇವತ್ತಿನ ಮುಖ ಆಗಿದೆ ಎಂದು ಭಾವಿಸಿದ್ದೇನೆ. ಈ ಅಸ್ಪೃಶ್ಯತೆ ಮತ್ತು ದೌರ್ಜನ್ಯದ ವಿರುದ್ಧ ಸರ್ಕಾರದ ವತಿಯಿಂದ ಅಥವಾ ಸಂಘ ಸಂಸ್ಥೆಯಿಂದ ಅಧ್ಯಯನ ಮಾಡಿ ಜನರಿಗೆ ತಿಳುವಳಿಕೆ. ಹೇಳತಕ್ಕ ಸಾಮಾಜಿಕ ಕ್ರಾಂತಿ ಮಾಡತಕ್ಕ ಕೆಲಸವನ್ನು ಹಮ್ಮಿಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಇನ್ನೊಂದು ವಿಚಾರ ಎಂದರೆ ಅದು ಪ್ರವಾಸೋದ್ಯಮ ಇಲಾಖೆ. ನಾನು ಬಂದಿರತಕ್ಕ ಕ್ಷೇತ್ರ ಎಂದರೆ ಬೇಲೂರು ಮತ್ತು ಹಳೆಬೀಡು ಕ್ಷೇತ್ರ. ಇದು ಪ್ರವಾಸೋದ್ಯಮ ಕೇಂದ್ರ. ಆ ಕೇಂದ್ರಕ್ಕೆ ಯಾರೇ ಬಂದರೂ ಕೂಡ ಅವರಿಗೆ ಬೇಕಾದ ವ್ಯವಸ್ಥೆ ಇಲ್ಲದಿದ್ದರೆ ಸಾಮಾನ್ಯವಾಗಿ ಮೂಗು ಮುರಿಯುವುದು ಸಹಜ. ನಮ್ಮ ಮಾನ್ಯ ಉಪ ಮುಖ್ಯ ಮಂತ್ರಿಗಳಲ್ಲಿ ನನ್ನ ಪ್ರಾರ್ಥನೆ ಎಂದರೆ, ಪ್ರವಾಸೋದ್ಯಮ ಸ್ಥಳಗಳು ಯಾವು ಯಾವುವು ಇವೆ ಅವುಗಳ ಸರ್ವತೋಮುಖ ಬೆಳವಣಿಗೆಯನ್ನು ಪ್ರವಾಸೋದ್ಯಮ ಇಲಾಖೆಯೇ ವಹಿಸಿಕೊಂಡು ಆ ಕೆಲಸ ಮಾಡಬೇಕು. ನಮ್ಮಲ್ಲಿ ಇನ್ನೂ ಕೂಡ ಬಸ್ ಸ್ಟ್ಯಾಂಡ್ ನಿರ್ಮಾಣ ಕಾರ್ಯ ಪ್ರಾರಂಭ ಆಗಿಲ್ಲ ರಸ್ತೆಗಳು, ಕುಡಿಯುವ ನೀರಿನ ವ್ಯವಸ್ಥೆಗಳೂ ಕೂಡ ಸರಿಯಾಗಿಲ್ಲ. ನಾನೂ ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ದೇಶ ವಿದೇಶಗಳಿಂದ ಹಲವಾರು ಪ್ರವಾಸಿಗರು ಬರುತ್ತಾರೆ. ಇಲ್ಲಿಗೆ ಬಂದು ನೋಡಿಕೊಂಡು ಹೋದಮೇಲೆ ಬೇರೆ ಕಡೆ ಅವರು ನಮ್ಮ ಪ್ರದೇಶದ ಬಗ್ಗೆ ಮಾತನಾಡಿಕೊಳ್ಳುತ್ತಾರೆ. ಇದರಿಂದಾಗಿ ನಮ್ಮ ಕ್ಷೇತ್ರದ ಮರ್ಯಾದೆ ಹೋಗುವುದಕ್ಕಿಂತ ನಮ್ಮ ರಾಜ್ಯಸರ್ಕಾರದ ಮರ್ಯಾದೆ ಹೋಗುವ ಸಂಭವವೂ

ಉಂಟು. ದಯವಿಟ್ಟು ಅದಕ್ಕೆ ಆಸ್ಪದ ಕೊಡದೆ ಈ ಪ್ರವಾಸೋದ್ಯಮ ಸ್ಥಳಗಳು ಸರ್ವತೋಮುಖ ಬೆಳವಣಿಗೆ ಹೊಂದುವುದಕ್ಕೆ ತಾವು ಎಲ್ಲ ರೀತಿಯ ಕ್ರಮ ಕೈಗೊಳ್ಳಬೇಕು. ಅದು ಬೇಲೂರು ಇರಬಹುದು, ಹಳೇಬೀಡು ಇರಬಹುದು ಶ್ರವಣ ಬೆಳಗೊಳ ಹಂಪೆ ಅಥವಾ ಬೇರೆ ಇರಬಹುದು. ಇಂಥವುಗಳಿಗೆ ಆದ್ಯತೆಯ ಮೇಲೆ ಹಣವನ್ನೊದಗಿಸಿ ಈ ಪ್ರವಾಸಿ ಕೇಂದ್ರಗಳ ಬೆಳವಣಿಗೆಗೆ ಶ್ರಮವಹಿಸಬೇಕೆಂದು ಕೇಳಿಕೊಂಡು ಈ ಬೇಡಿಕೆಗಳ ಬಗ್ಗೆ ಮಾತನಾಡುವುದಕ್ಕೆ ಏನು ಅವಕಾಶವನ್ನು ಮಾಡಿಕೊಟ್ಟಿರಿ ಅದಕ್ಕೆ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ. ಮುನಿಯಪ್ಪ (ಗಾಂಧಿನಗರ) : ಮಾನ್ಯ ಅಧ್ಯಕ್ಷರೆ, ಕಳೆದ 3 ದಿನಗಳಿಂದ ಶಿಕ್ಷಣ ಮತ್ತು ಹಲವಾರು ಇಲಾಖೆಗಳ ಬಗ್ಗೆ ಚರ್ಚೆಮಾಡುವಂಥ ಈ ಸಂದರ್ಭದಲ್ಲಿ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ. ಕಳೆದ 9 ತಿಂಗಳ ಹಿಂದೆ ಈ ಶಾಸನ ಸಭೆಗೆ ಚುನಾವಣೆ ನಡೆದಂಥ ಸಂದರ್ಭದಲ್ಲಿ ನಮ್ಮ ಕ್ಷೇತ್ರದಲ್ಲಿ ಬರತಕ್ಕ ಸರ್ಕಾರಿ ಶಾಲೆಗಳಿಗೆಲ್ಲಾ ಆ ಕ್ಷೇತ್ರದ ಶಾಸಕರು ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷರು ಎನ್ನುವಂಥ ಪಟ್ಟವನ್ನು ನಮಗೆ ಕೊಟ್ಟರು. ನಾವು ಆ ಶಾಲೆಗಳೊಳಗೆ ಪ್ರವೇಶ ಮಾಡಿದರೆ ಅಲ್ಲಿರತಕ್ಕ ಶಿಕ್ಷಕರು, ಶಿಕ್ಷಕಿಯರು, ವಿದ್ಯಾರ್ಥಿಗಳು, ಶಾಲೆಯ ಪರಿಸ್ಥಿತಿಯನ್ನು ನೋಡಿದಾಗ ನನಗೆ ಏನು ಅನಿಸಿತು ಎಂದರೆ, ನಮ್ಮ 5 ವರ್ಷದ ಅವಧಿಯನ್ನು ಪೂರ್ಣವಾಗಿ ಆ ಶಾಲೆಗಳ ಅಭಿವೃದ್ಧಿಗೆ ವಿನಿಯೋಗಿಸಿದರೂ ಕೂಡ ತೀರದೇ ಇರುವುದು ನನಗೆ ಕಂಡು ಬಂತು. ಇವತ್ತು ತಮಗೆ ಹೇಳುವುದಾದರೆ, ನಮ್ಮ ವಿದ್ಯಾ ಶಾಲೆಗಳ ವ್ಯವಸ್ಥೆ 3 ರೀತಿಯದು ಇದೆ. ಮೊದಲನೆಯದು ಸರ್ಕಾರ ಮತ್ತು ಮಹಾನಗರ ಪಾಲಿಕೆಗಳು ನಡೆಸುವಂಥ ವಿದ್ಯಾ ಸಂಸ್ಥೆಗಳ ವಿದ್ಯಾ ಪದ್ಧತಿಯೇ ಒಂದು ರೀತಿ. ಕೇಂದ್ರೀಯ ವಿದ್ಯಾಲಯಗಳು ನಡೆಸುವ ಇನ್ನೊಂದು ಪದ್ಧತಿ. ಮತ್ತು ಅಪ್ಪನನ್ನು ಅಪ್ಪ, ಅಮ್ಮನನ್ನು ಅಮ್ಮ ಎಂದು ಹೇಳುವುದಕ್ಕೆ ನಾಚಿಕೆ ಪಟ್ಟುಕೊಂಡು ಮಮ್ಮಿ ಡ್ಯಾಡಿ, ಅಂಕಲ್ ಎಂದು ಹೇಳುವಂಥ ವಿದ್ಯಾ ಸಂಸ್ಥೆಗಳು ಇನ್ನೊಂದು ಕಡೆ. ಈ ರೀತಿ 3 ವ್ಯವಸ್ಥೆ ನಮ್ಮಲ್ಲಿ ಏನಿದೆ ಇದರ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಇವತ್ತು ಬೆಂಗಳೂರು ಮಹಾ ನಗರದಲ್ಲಿ ಶಾಲೆಗಳು ಏನಿವೆ ಅವುಗಳ ಬಗ್ಗೆ ಸಾಕಷ್ಟು ವಿಚಾರಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ.

ಆದ್ದರಿಂದ ನಾನು ಇದರ ಬಗ್ಗೆ ಅಂಕಿಅಂಶಗಳನ್ನು ಕೊಟ್ಟು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಸಾಧಾರಣ ಶೈಲಿಯಲ್ಲಿ ಅಂದರೆ ನಮ್ಮ ಕಣ್ಣಮುಂದೆ ಪ್ರತಿನಿತ್ಯ ನಡೆಯತಕ್ಕ ಘಟನೆಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ. ಇವತ್ತು ಬಹಳಷ್ಟು ಶಾಲೆಗಳಲ್ಲಿ ಸಾಕಷ್ಟು ಮಕ್ಕಳಿದ್ದರೂ ಅಲ್ಲಿ ನೀರಿನ ವ್ಯವಸ್ಥೆ ಶೌಚಾಲಯದ ವ್ಯವಸ್ಥೆ ಇಲ್ಲ. ಆ ಶಾಲೆಗಳಲ್ಲಿ ಹೋದರೆ ವಿದ್ಯೆಯನ್ನು ಕಲಿಯಬೇಕೆಂಬ ಮನಸ್ಸೂ ಕೂಡ ಆ ಮಕ್ಕಳಲ್ಲಿ ಬರದೇ ಇರುವಂಥ ಪರಿಸ್ಥಿತಿ ನನ್ನ ಕ್ಷೇತ್ರದಲ್ಲಿ ಇರತಕ್ಕ ಸರ್ಕಾರಿ ಶಾಲೆಗಳಲ್ಲಿದೆ. ಅಷ್ಟೊಂದು ಹದಗೆಟ್ಟಿವೆ. ಈ ಶಾಲೆಗಳಿಗೆ ಬರತಕ್ಕ ಮಕ್ಕಳು ಯಾರು ಎಂದರೆ ಅದು ಪ್ರಾಥಮಿಕ ಶಾಲೆ ಇರಬಹುದು, ಪ್ರೌಢ ಶಾಲೆ ಆಗಿರಬಹುದು, ಅಲ್ಲಿಗೆ ಬರುವವರು ಎಂದರೆ ವರಮಾನ ರೇಖೆಗಿಂತ ಕಡಿಮೆ ಆದಾಯ ಇರುವವರ ಮಕ್ಕಳು, ಮಧ್ಯಮ ವರ್ಗದ, ಬಡವರ ಮತ್ತು ಕಡು ಬಡವರ ಮಕ್ಕಳು ಈ ನಗರಪಾಲಿಕೆ ಮತ್ತು ಸರ್ಕಾರೀ ಶಾಲೆಗಳಿಗೆ ಬರುತ್ತವೆ. ಅವರ ತಂದೆತಾಯಿಗಳು ಬೆಳಿಗ್ಗೆ ಎದ್ದಾಗ ಆ ಮಕ್ಕಳನ್ನು ಬಸ್ಸಿಗೆ ಕಳುಹಿಸುವುದಕ್ಕೆ ಮುಂಚೆ ತಿಂಡಿ ಕೊಡುವುದಕ್ಕೂ ಕೂಡ ಸಾಧ್ಯವಿಲ್ಲದಂಥ ವರ್ಗಕ್ಕೆ ಸೇರಿದ ಮಕ್ಕಳು ಈ ಶಾಲೆಗಳಿಗೆ ಬರುತ್ತವೆ. ಅಲ್ಲಿರತಕ್ಕ ವಾತಾವರಣ ಚೆನ್ನಾಗಿದ್ದರೆ ಆ ಮಕ್ಕಳು ವಿದ್ಯೆ ಕಲಿಯುವುದಕ್ಕೆ ಅನುಕೂಲವಾಗುತ್ತದೆ. ಇಂಥ ಉತ್ತಮ ವಾತಾವರಣ ನಮ್ಮ ರಾಜ್ಯದಲ್ಲಿರತಕ್ಕ ಹಲವಾರು ಶಾಲೆಗಳಲ್ಲಿಲ್ಲ.

ಎಷ್ಟೋ ಕಟ್ಟಡಗಳಿಗೆ ಕಟ್ಟಿದ ಸಂದರ್ಭದಲ್ಲಿ ಸುಣ್ಣ ಬಣ್ಣ ಮಾಡಿದ್ದಾರೇನೋ ಅನಿಸುವಷ್ಟು ರೀತಿಯಲ್ಲಿ ಕಟ್ಟಡಗಳಿಗೆ ಪಾಚಿ ಕಟ್ಟಿಕೊಂಡಿರುತ್ತದೆ. ಮತ್ತೆ ಆ ಬಿದ್ದು ಹೋದ ಅಥವಾ ಮುರುಕಲು ಶಾಲೆಗಳಿಗೆ ಸುಣ್ಣ ಬಣ್ಣ ಮಾಡತಕ್ಕ, ಅಥವಾ ರಿಪೇರಿ ಮಾಡತಕ್ಕ ಕೆಲಸ ಆಗಿಲ್ಲ. ಇವತ್ತು ಈ ಪರಿಸ್ಥಿತಿ ಬದಲಾಗಬೇಕು. ತಮಗೆ ಗೊತ್ತಿರುವಂತೆ, ಈ ಬೆಂಗಳೂರಿನಲ್ಲಿ ಯಾವುದೇ ಒಂದು ಶಾಲೆಯನ್ನು ಸಂಜೆ ಬಿಟ್ಟಾಗ ಸುಮಾರು 2-3 ಸಾವಿರ ಮಕ್ಕಳು ಹೊರಗಡೆ ಬರುತ್ತಾರೆ. ಅದನ್ನು ನೋಡಿದರೆ ಹಕ್ಕಿಯ ಗೂಡು ನೆನಪಿಗೆ ಬರುತ್ತದೆ. ಅಂಥ ಸಾವಿರಾರು ಶಾಲೆಗಳನ್ನು ಈ ಬೆಂಗಳೂರು ನಗರದಲ್ಲಿ ನಾವು ನೋಡುತ್ತಿದ್ದೇವೆ. ಆ ಶಾಲೆಗಳ ಪರಿಸ್ಥಿತಿ ಹೇಗಿದೆ ಎಂದು ನೋಡಿದರೆ, ಆ ಮಕ್ಕಳು ಅಲ್ಲಿ ವಿದ್ಯೆ ಕಲಿತು, ಸಂಜೆ ಮನೆಗೆ ಹೋಗಿ ಪಾಠವನ್ನು ತಮ್ಮ ತಂದೆತಾಯಿಗಳಿಂದ ಹೇಳಿಸಿಕೊಳ್ಳುವುದಕ್ಕೂ ಆಗದೇ ಇರುವಂಥ ಪರಿಸ್ಥಿತಿ ಒಂದು ಕಡೆ ಇದ್ದರೆ, ಇನ್ನು ಕೆಲವರಿಗೆ ಅಂಥ ಒಂದು ಅವಕಾಶ ಇರಬಹುದು. ನಾನು ಈ ಮೊದಲೇ ಹೇಳಿದಂತೆ, ಕೇಂದ್ರೀಯ ವಿದ್ಯಾಲಯಗಳ ವಿದ್ಯಾ ವ್ಯವಸ್ಥೆ ಒಂದು ರೀತಿ, ಕಾನ್ವೆಂಟ್ ವಿದ್ಯಾ ವ್ಯವಸ್ಥೆ ಇನ್ನೊಂದು ರೀತಿ, ಸರ್ಕಾರಿ ಮತ್ತು ನಗರಪಾಲಿಕೆಗಳ ಶಾಲೆಗಳ ವಿದ್ಯಾ ವ್ಯವಸ್ಥೆ ಮತ್ತೊಂದು ರೀತಿ ಇದೆ.

ಈ ವಿದ್ಯಾ ವ್ಯವಸ್ಥೆಯಲ್ಲಿ ಏನು ಬಡವರ ಮಕ್ಕಳು ಇದ್ದಾರೆ, ಅವರು ಒಂದು ಪ್ರಾಥಮಿಕ ಶಾಲೆಗೋ ಅಥವಾ ಎಲ್.ಕೆ.ಜಿ.ಗೋ ಯು.ಕೆ.ಜಿ.ಗೋ ಸೇರಿಸಬೇಕಾದರೆ ಇವತ್ತು ಖಾಸಗಿ ಶಾಲೆಗಳಿಗೆ ಹಲವಾರು ಸಾವಿರ ರೂಪಾಯಿ ಹಣವನ್ನು ಡೊನೇಷನ್ನಾಗಿ ಕೊಡಬೇಕಾಗುತ್ತದೆ. ಡೊನೇಷನ್ನಾಗಿ ಕೊಟ್ಟು ಅವರು ಶಾಲೆಗೆ ಸೇರಿಸಿ ಅವರು ವಿದ್ಯೆಯನ್ನು ಪಡೆಯುವುದಕ್ಕೆ ಸಾಮಾನ್ಯ ಜನರು, ಬಡವರ ಕೈಯಲ್ಲಿ ಇವತ್ತು ಸಾಧ್ಯವಾಗದೇ ಇರುವ ಪರಿಸ್ಥಿತಿ ಇದೆ. ಇನ್ನೂ ಕೆಲವು ಶಾಲೆಗಳು ಇವೆ. ಸರ್ಕಾರ ಅಂಗೀಕಾರ ಕೊಟ್ಟಿರತಕ್ಕಂಥ ಶಾಲೆಗಳು. ಆ ಶಾಲೆಗಳು ಮಕ್ಕಳಿಗೆ ಇಂಟರ್‌ವ್ಯೂ ಮಾಡುವುದಿಲ್ಲ, ತಂದೆತಾಯಿಗಳನ್ನು ಇಂಟರ್‌ವ್ಯೂ ಮಾಡುತ್ತಾರೆ. ತಂದೆ ತಾಯಿಗಳನ್ನು ಇಂಟರ್‌ವ್ಯೂ ಮಾಡಿ ತಂದೆ ತಾಯಿಗಳು ಓದದೇ ಇದ್ದರೆ ಅಂಥ ಮಕ್ಕಳಿಗೆ ಆ ಶಾಲೆಗೆ ಸೇರಿಸಿಕೊಳ್ಳುವುದಿಲ್ಲ, ಅವರು ಮಕ್ಕಳಿಗೆ ವಿದ್ಯೆ ಕೊಡಿಸುವುದಿಲ್ಲ, ಮಕ್ಕಳನ್ನು ಹಡೆದಂಥ ತಂದೆ ತಾಯಿಗಳು ಓದು ಬರಹ ಬರದೇ ಇದ್ದರೆ, ಅವರಿಗೆ ಆ ಶಾಲೆಯಲ್ಲಿ ಅಂಥ ಮಕ್ಕಳನ್ನು ಸೇರಿಸಿಕೊಳ್ಳುವುದಿಲ್ಲ. ರಾಜ್ಯ ಸರ್ಕಾರ......

ಶ್ರೀ ವಿಶ್ವೇಶ್ವರ ಹೆಗಡೆ : ಈ ದಿನ ಬೆಳಗ್ಗೆ ಸದನದಲ್ಲಿ ಬಹಳ ಗಂಭೀರವಾದಂಥ ವಿಷಯ ಪ್ರಸ್ತಾಪವಾಗಿದೆ. ಹಾಗಾಗಿ ನಾವು ಸಭಾತ್ಯಾಗ ಮಾಡಿ ಎಲ್ಲವೂ ಆಗಿದೆ. ಈ ವಿಷಯದ ಬಗ್ಗೆ ಸರಿಯಾದಂಥ ಒಂದು ಕ್ರಮವನ್ನು ಸರ್ಕಾರ ಯಾವ ರೀತಿ ತೆಗೆದುಕೊಳ್ಳುತ್ತದೆ. ಸರ್ಕಾರ ಇದಕ್ಕೆ ರಾಜೀನಾಮೆ ಕೊಡಬೇಕಾಗಿರತಕ್ಕಂಥ ತೀವ್ರ ಆಗತ್ಯತೆ ಇದೆ. ಇವತ್ತು ಅಂಥ ಒಂದು ಸಂದರ್ಭ ಉಂಟಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಳೆ ನಾವು ಗವರ್ನರ್ ಅನ್ನು ಭೇಟಿ ಮಾಡುತ್ತಿದ್ದೇವೆ, ಈ ಸರ್ಕಾರ ಅಧಿಕಾರದಲ್ಲಿ ಮುಂದುವರೆಯುವಂಥ ಒಂದು ನೈತಿಕ ಹಕ್ಕನ್ನು ಕಳೆದುಕೊಂಡಿದೆ ಎಂದು ಹೇಳಿ ಇಂಥ ಸಮಯದಲ್ಲಿ ಕಾರ್ಯಕಲಾಪ ಆಗುವಂಥಾದ್ದಕ್ಕೆ ತಾವು ಅವಕಾಶ ಮಾಡಿಕೊಡಬಾರದು ಎಂದು ಹೇಳುತ್ತೇವೆ. ಈ ಸರ್ಕಾರ ರಾಜೀನಾಮೆ ಕೊಡಬೇಕು ಈ ಒಂದು ಅಪರಾಧ, ಅಕ್ಷಮ್ಯ ಅಪರಾಧ ಮಾಡಿದೆ, ಒಬ್ಬ ಪ್ರಾಮಾಣಿಕ ಅಧಿಕಾರಿ ಜೈಲಿಗೆ ಹೋಗುವುದಕ್ಕೆ ಜವಾಬ್ದಾರಿಯನ್ನು, ನೈತಿಕ ಹೊಣೆಯನ್ನು ಹೊತ್ತು ರಾಜೀನಾಮೆಯನ್ನು ಕೊಡಬೇಕು ಎಂದು ಹೇಳಿ ನಾವು ಅನಿವಾರ್ಯವಾಗಿ ಧರಣಿ ಕುಳಿತುಕೊಳ್ಳುತ್ತಿದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಇಂಥ ಸಂದರ್ಭದಲ್ಲಿ ಸಭೆ ನಡೆಯುವುದು ಅಷ್ಟು ಸುಕ್ತ ಅಲ್ಲ ಎಂದು ಅನ್ನಿಸುತ್ತದೆ. ಇಡೀ ಕರ್ನಾಟಕ ರಾಜ್ಯದಲ್ಲಿ ಈ ಬೇಜವಾಬ್ದಾರಿ ಸರ್ಕಾರದ ಬಗ್ಗೆ ಛೀ, ಥೂ ಅನ್ನುವಂಥ ಸ್ಥಿತಿ ಬಂದು ಹೋಗಿದೆ. ಇಂಥ ಸಂದರ್ಭದಲ್ಲಿ ಸಭೆ ನಡೆಯುವುದು ಸೂಕ್ತ ಅಲ್ಲ. ಯಾವ

ಕಾರಣಕ್ಕೂ ಕೂಡ ಸರ್ಕಾರ, ಒಂದು ನಿಮಿಷ ಕೂಡ ಈ ಸರ್ಕಾರ ಅಧಿಕಾರದಲ್ಲಿ ಮುಂದುವರಿಯ ಕೂಡದು. ನಾವು ರಾಜ್ಯಪಾಲರ ಬಳಿ ಹೋಗಿ ಮಾತನಾಡುವವರಿದ್ದೇವೆ. ಸರ್ಕಾರದ ಬೇಜವಾಬ್ದಾರಿ ಧೋರಣೆಯನ್ನು ಪ್ರತಿಭಟಿಸುತ್ತೇವೆ. ಸರ್ಕಾರದ ಧೋರಣೆಯನ್ನು ಪ್ರತಿಭಟನೆ ಮಾಡಿ ನಾವು ಇವತ್ತು ಧರಣಿ ಕುಳಿತುಕೊಳ್ಳುತ್ತಿದ್ದೇವೆ.

ಶ್ರೀ ಬಿ. ಮುನಿಯಪ್ಪ : ಇಲ್ಲಿ ಬೇರೆ ಸದಸ್ಯರು ಅವರ ಭಾವನೆಗಳನ್ನು ವ್ಯಕ್ತಪಡಿಸುವಂಥ ಮುಕ್ತ ವಾತಾವರಣವನ್ನು ಸೃಷ್ಟಿ ಮಾಡಬೇಕಾಗಿದೆ. ಇಲ್ಲಿ ಬೇರೆ ಸದಸ್ಯರು ಮಾತನಾಡುವಾಗ ಗಂಟೆಗಟ್ಟಳೆ, ದಿನಗಟ್ಟಳೆ ನಾವು ಕುಳಿತು ಕೇಳಿದ್ದೇವೆ. ಇವತ್ತು ವಿದ್ಯಾ ಇಲಾಖೆಯ ಬಗ್ಗೆ ಹಾಗೂ ಹಲವಾರು ಇಲಾಖೆಗಳ ಬಗ್ಗೆ ಚರ್ಚೆ ಮಾಡುವಂಥ ಪರಿಸ್ಥಿತಿ ಇದೆ. ಮಕ್ಕಳನ್ನು ಶಾಲೆಗೆ ಸೇರಿಸಬೇಕಾದರೆ ತಂದೆ ತಾಯಿಗಳು ಓದಿರಬೇಕು, ಅಂಥವರ ಮಕ್ಕಳನ್ನು ಮಾತ್ರ ಸೇರಿಸಿಕೊಳ್ಳುವಂಥ ಶಾಲೆಗಳು ಏನು ಇವೆ, ತಕ್ಷಣ ಅಂಥ ಶಾಲೆಗಳನ್ನು ಸರ್ಕಾರ ತಡೆಯಬೇಕು.ಅಂಥ .ಶಾಲೆಗಳಿಗೆ ಅನುಮತಿ ಕೊಟ್ಟಿದ್ದನ್ನು ವಾಪಸ್ಸು ಪಡೆಯಬೇಕು. ಕಾರಣ ಅವಿದ್ಯಾವಂತರಾಗಿದ್ದ ತಂದೆ ತಾಯಿಗಳು, ಅವರ ಮಕ್ಕಳೂ ಕೂಡ ಅವಿದ್ಯಾವಂತರು ಆಗಿರಬೇಕು ಎಂಬ ಯಾವುದೇ ಕಾನೂನು ಇಲ್ಲ, ಕಟ್ಟಳೆಗಳು ಇಲ್ಲ. ಅಂಥ ಹಲವಾರು ಶಾಲೆಗಳು ಇವತ್ತು ರಾಜ್ಯದೊಳಗೆ, ರಾಜ್ಯದ ಎಲ್ಲೆಡೆಯಲ್ಲಿ ತಲೆ ಎತ್ತಿವೆ. ಅಂಥ ಶಾಲೆಗಳನ್ನು ಸರ್ಕಾರ ಗುರುತಿಸಿ ಆ ಶಾಲೆಗಳನ್ನು ಮುಂದುವರೆಯುವುದಕ್ಕೆ ಅವಕಾಶವನ್ನು ಕೊಡಬಾರದು ಎಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಪಟ್ಟಣ ಪ್ರದೇಶಗಳಲ್ಲಿ ಇರತಕ್ಕಂಥ ಮಕ್ಕಳ ಪರಿಸ್ಥಿತಿ ಒಂದು ಆದರೆ, ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕಂಥತ ಮಕ್ಕಳು, ಇವತ್ತು ಹಳ್ಳಿಗಾಡಿನಲ್ಲಿ ಹೋಗಿ ನೋಡುವಾಗ ಅದು ಕುಗ್ರಾಮ ಆಗಿರಬುಹುದು, ತಾಲ್ಲೂಕಿನ ಮುಖ್ಯ ಕೇಂದ್ರ ಆಗಿರಬಹುದು, ಅಲ್ಲಿರತಕ್ಕಂಥ ಮಕ್ಕಳ ಪರಿಸ್ಥಿತಿ ಬಹಳ ಕಷ್ಟಕರವಾದದು. ಇವತ್ತು ಹಳ್ಳಿಯಲ್ಲಿ ಎಷ್ಟೋ ಕಡೆ 20 ಎಕರೆ ಜಮೀನು ರೈತರಿಗೆ ಇರುತ್ತದೆ ಅವನಿಗೆ 20 ಎಕರೆ ಜಮೀನು ಇದ್ದರೂ ಕೂಡ ಅವನು ಸ್ವಂತ ಹೋಲದಲ್ಲಿ ಮಳೆ ಅಥವಾ ಪ್ರಕೃತಿಯ ಯಾವುದಾದರೂ ಸೌಲಭ್ಯ ಇಲ್ಲದೇ ಅವರು ಬೇರೆಯವರ ಜಮೀನಿನಲ್ಲಿ ಹೋಗಿ ಕೆಲಸ ಮಾಡಬೇಕಾದಂಥ ಪರಿಸ್ಥಿತಿ ಇವತ್ತು ಈ ಕರ್ನಾಟಕದ ಉದ್ದಗಲದಲ್ಲಿ ಸಾವಿರಾರು ಹಳ್ಳಿಗಳಲ್ಲಿ ಇದೆ. ಅಂಥ ಬಡವರ ಮಕ್ಕಳನ್ನು ಅವರು ಶಾಲೆಗೆ ಸೇರಿಸಬೇಕಾದರೆ ಅವರಿಂದ ಸಾಧ್ಯವಾಗುತ್ತಿಲ್ಲ. ಆಗ ಆ ಮಕ್ಕಳನ್ನು ಹಡೆದಂಥ ತಂದೆ ತಾಯಿಗಳು ಏನು ಮಾಡುತ್ತಾರೆ ಎಂದರೆ ಆ ಮಕ್ಕಳನ್ನು ದನ ಮೇಯಿಸುವುದಕ್ಕೆ, ಕುರಿ ಕಾಯಿಸುವುದಕ್ಕೆ, ಊರಿನಲ್ಲಿ ಇರತಕ್ಕಂಥ ಶ್ರೀಮಂತರ ಮನೆ ಕೆಲಸ ಮಾಡುವುದಕ್ಕೆ ಆ ಮಕ್ಕಳನ್ನು ಕಳುಹಿಸುತ್ತಾರೆ. ಬಾಲ್ಯದಲ್ಲಿ ಅಕ್ಷರವನ್ನು ಕಲಿತು ಆಟವನ್ನು ಆಡಬೇಕಾದಂಥ ಮಕ್ಕಳು ಶಾಲೆಗೆ ಹೋಗಲಿಕ್ಕೆ ಸಾಧ್ಯವಾಗದಂಥ ಪರಿಸ್ಥಿತಿಗಳು ಇವತ್ತು ನಮ್ಮ ರಾಜ್ಯದಲ್ಲಿ ಹಲಾವಾರು ಕಡೆ ಇದೆ. ಅಂಥವರ ಮಕ್ಕಳು ಓದಬೇಕಾದರೆ ಸರ್ಕಾರ ಸೌಲಭ್ಯವನ್ನು ಒದಗಿಸಿ ಕೊಡಬೇಕಾಗುತ್ತದೆ. ಇವತ್ತು ಪಕ್ಕದ ರಾಜ್ಯದಲ್ಲಿ, ನಮ್ಮ ಸೋದರ ರಾಜ್ಯ ತಮಿಳುನಾಡಿನಲ್ಲಿ ಅವರು 75-80 ಲಕ್ಷ ಶಾಲಾ ಮಕ್ಕಳಿಗೆ ಸರ್ಕಾರದ ಖರ್ಚಿನಿಂದ ಪ್ರತಿನಿತ್ಯ ಊಟವನ್ನು ಹಾಕುವಂಥ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಆ ಯೋಜನೆ ಜಾರಿಗೆ ಬಂದ ಮೇಲೆ ಏನು ಲಾಭ ಎಂದು ಕೇಳಿದರೆ, ಶ್ರೀಮಂತರ ಮನೆಯಲ್ಲಿ ದನ ಕಾಯುವುದಕ್ಕೆ, ಮೇಕೆ ಮೇಯಿಸುವುದಕ್ಕೆ ಹೋಗಿದ್ದಂಥ ಮಕ್ಕಳು ಯಾರಿದ್ದಾರೆ, ಅವರನ್ನು ಬಿಡಿಸಿ, ಸರ್ಕಾರ ಊಟ ಹಾಕುತ್ತದೆ ಎಂದು ಆ ಮಕ್ಕಳನ್ನು ಶಾಲೆಗೆ ಸೇರಿಸಿದ್ದಾರೆ. ಶಾಲೆಗೆ ಸೇರಿದ ಮೇಲೆ ಆ ಮಕ್ಕಳು ಅಲ್ಪಸ್ವಲ್ಪ ಅಕ್ಷರಗಳನ್ನು ಕಲಿಯುತ್ತಾರೆ. ಅವರು ಏನು 4-5 ನೇ ಕ್ಲಾಸ್ ದಾಟಿದರೆ ಏನೋ ಅವರಿಗೆ ಶಾಲೆಗೆ ಹೋಗಿ ನಾಲ್ಕು ಅಕ್ಷರ ಬಂದ ಮೇಲೆ ಹೇಗಾದರೂ ಕಷ್ಟಪಟ್ಟು ಬೇರೆ ಮಕ್ಕಳಂತೆ ಓದಬೇಕು ಎನ್ನುವಂಥ ಮನೋಭಾವ ಆ ಮಕ್ಕಳಿಗೆ ಬರುತ್ತದೆ. ಇಲ್ಲಿ ಶ್ರೀರಾಮರೆಡ್ಡಿಯವರು ಮಾತನಾಡುವಾಗ ಅಪೌಷ್ಟಿಕ ಆಹಾರದ ಪಾಕೆಟ್‌ಗಳನ್ನು ತೋರಿಸಿದರು. ಅಂಥ ಪಾಕೆಟ್ ಕೊಟ್ಟರೆ ಮಕ್ಕಳಿಗೆ ಉಪಯೋಗವಾಗುವುದಿಲ್ಲ.

ಸರ್ಕಾರದ ಖರ್ಚಿನಲ್ಲಿ ಊಟ ಹಾಕುವಂಥ ಒಂದು ಯೋಜನೆಯನ್ನು ತರುವಾಗ, ಪಟ್ಟಣ ಪ್ರದೇಶಗಳಿಗಿಂತ ಹೆಚ್ಚಾಗಿ ಹಳ್ಳಿಗಾಡಿನಲ್ಲಿ, ಕುಗ್ರಾಮದಲ್ಲಿ ಇರತಕ್ಕಂಥ ಬಡವರ ಮಕ್ಕಳಿಗೆ ವಿದ್ಯೆಯನ್ನು ಕಲಿಸಲು ಅನುಕೂಲವಾಗುತ್ತದೆ. ಇವತ್ತು ನಾವು ನಿಜವಾಗಿ ಒಪ್ಪಿಕೊಳ್ಳಬೇಕಾಗಿದೆ, ಸ್ವಾತಂತ್ರ್ಯ ಬಂದು 48 ವರ್ಷಗಳ ಕಾಲದಲ್ಲಿ ಎಷ್ಟೋ ಹಳ್ಳಿಗಳಲ್ಲಿ ಊಟ ಇಲ್ಲದೇ ಇರತಕ್ಕಂಥ ಕಡುಬಡವರ ಮಕ್ಕಳು ಇದ್ದಾರೆ. ಅಂಥವರ ಮಕ್ಕಳೂ ಕೂಡ ಶಾಲೆಗೆ ಹೋಗಿ ಅಕ್ಷರವನ್ನು ಕಲಿಯಲಿಕ್ಕೆ ಸರ್ಕಾರ ಅವಕಾಶವನ್ನು ಮಾಡುವಂಥ ರೀತಿಯಲ್ಲಿ ಈ ಮಧ್ಯಾಹ್ನದ ಊಟ ಹಾಕುವಂಥ ಒಂದು ಯೋಜನೆಯನ್ನು ಸರ್ಕಾರ ಜಾರಿಗೆ ತರಬೇಕು ಎಂದು ನಾನು ಒತ್ತಾಯ ಮಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಪ್ರಾಥಮಿಕ ಶಿಕ್ಷಣ, ಪ್ರೌಢ ಶಿಕ್ಷಣ ಹಾಗೂ ಉನ್ನತ ಶಿಕ್ಷಣ ಮಟ್ಟಕ್ಕೆ ಬರುವಾಗ ಇವತ್ತು ಎಷ್ಟೋ ಜನರು ಸರ್ಕಾರದ, ಜನಸಾಮಾನ್ಯರ ತೆರಿಗೆ ಹಣದಿಂದ ಓದಿದಂಥ ಇಂಜಿನಿಯರುಗಳು, ಡಾಕ್ಟರುಗಳು, ಜನರು ಕಟ್ಟುವಂಥ ಕೊಡುವಂಥ ತೆರಿಗೆ ಹಣದಿಂದ ಲಕ್ಷಾಂತರ ರೂಪಾಯಿ ಹಣವನ್ನು ಖರ್ಚುಮಾಡಿ ಅವರು ವಿದ್ಯಾವಂತರು ಆಗುತ್ತಾರೆ.

ಅವರು ವಿದ್ಯಾವಂತರಾಗಿ ಹೊರಗೆ ಬರುವಾಗ ಅವರ ಕೈಗಳಿಗೆ ಇವತ್ತು ಯಾರೂ ಕೆಲಸ ಕೊಡಲಿಕ್ಕೆ ಸಾಧ್ಯವಾಗಿಲ್ಲ. ಎಷ್ಟೋ ಸರ್ಕಾರಗಳು ಬಂದರೂ ಕೂಡ, ಪ್ರತೀವರ್ಷ ವಿಶ್ವವಿದ್ಯಾನಿಲಯಗಳಿಂದ ಪದವಿಯನ್ನು ಪಡೆದು ಲಕ್ಷಾಂತರ ಜನ ಪದವೀಧರರು ಹೊರಗೆ ಬರುತ್ತಾರೆ. ಅವರ ಕೈಗಳಿಗೆ ಕೆಲಸ ಕೊಡಲಿಕ್ಕೆ ಸಾಧ್ಯವಾಗಿಲ್ಲ. ಅಂಥ ಪರಿಸ್ಥಿತಿಯಲ್ಲಿ ಡಾಕ್ಟರುಗಳು, ಇಂಜಿನಿಯರುಗಳಾಗಿ ಬರುವವರು, ಈ ನಾಡಿನ ಜನರ ಹಣದಿಂದ ಓದಿದವರು,ಈ ನಾಡಿನಲ್ಲಿ ಇರತಕ್ಕಂಥ ಕುಗ್ರಾಮದಲ್ಲಿರುವ ಬಡವರ ಮಕ್ಕಳಿಗೆ, ಅವರ ಆರೋಗ್ಯವನ್ನು ತಪಾಸಣೆ ಮಾಡುವುದನ್ನು ಬಿಟ್ಟು, ಅವನು ಬೇರೆ ದೇಶಕ್ಕೆ ಹೋಗಿ ಈ ನಾಡಿನ ಮಣ್ಣಿನ ಮಕ್ಕಳ ಹಣದಿಂದ ಅವನು ಬೇರೆ ದೇಶದಲ್ಲಿ ಹಣ ಮಾಡಲಿಕ್ಕೆ ಮತ್ತು ಬೇರೆ ದೇಶದ ಜನರ ಆರೋಗ್ಯವನ್ನು ತಪಾಸಣೆ ಮಾಡಲು ದೇಶಾಂತರ ಹೋಗುವಂಥದನ್ನು ನಾವು ನೋಡುತ್ತಿದ್ದೇವೆ. ಅದನ್ನು ಇವತ್ತು ತಡೆಯಬೇಕಾಗಿದೆ. ಎಷ್ಟೋ ಹಳ್ಳಿಗಳಲ್ಲಿ ಎಷ್ಟೋ ತಾಲ್ಲೂಕು ಮಟ್ಟಗಳಲ್ಲಿ ಆಸ್ಪತ್ರೆಗಳು ಇದ್ದರೂ ಕೂಡ ಆಸ್ಪತ್ರೆಗಳಲ್ಲಿ ಡಾಕ್ಟರುಗಳು ಇಲ್ಲ. ಎಷ್ಟೋ ಜನ ಡಾಕ್ಟರುಗಳು ಅಲ್ಲಿ ಹೋಗಿ ಕೆಲಸ ಮಾಡಲಿಕ್ಕೆ ಇಷ್ಟ ಪಡುವುದಿಲ್ಲ. ಇಷ್ಟ ಪಡುವುದೆಲ್ಲಾ ಸುಂದರವಾದ ನಗರದಲ್ಲಿ ಇರಬೇಕು, ಬೆಂಗಳೂರಿನಂಥ ಮಹಾನಗರದಲ್ಲಿ ಇರಬೇಕು ಎಂದು ಪ್ರತಿಯೊಬ್ಬರೂ ಬಯಸುತ್ತಾರೆ. ಆ ಬಯಸುವ ಹಿನ್ನೆಲೆಯಲ್ಲಿ ಈ ರಾಜ್ಯದಲ್ಲಿ ಇರತಕ್ಕಂಥ ಎಷ್ಟೋ ಹಳ್ಳಿಗಳಲ್ಲಿ ಎಷ್ಟೋ ಬಡವರು ಅವರಿಗೆ ಏನಾದರೂ ಕಾಯಿಲೆ ಬಂದರೆ ಅವರು ಊರಿನ ಮುಂದೆ ಇರತಕ್ಕಂಥ ಮಾರಮ್ಮನ ದೇವಸ್ಥಾನದಲ್ಲೋ ಅಥವಾ ಕಾಳೀ ದೇವಸ್ಥಾನದ ಮುಂದೆ ಅವರನ್ನು ಮಲಗಿಸಿ ಬೇವಿನ ಸೊಪ್ಪಿನ ನೀರನ್ನು ಎರಚಿ, ಆ ನೀರನ್ನು ಕುಡಿಸುವ ಪರಿಸ್ಥಿತಿಯನ್ನು ಈ ರಾಜ್ಯದಲ್ಲಿ ನೋಡುತ್ತಿದ್ದೇವೆ. ಈ ಪರಿಸ್ಥಿತಿ ಬದಲಾವಣೆ ಆಗಬೇಕು. ಇವತ್ತು ಹಳ್ಳಿಗಳಲ್ಲಿ ಇರತಕ್ಕಂಥ ಮಕ್ಕಳೂ ಕೂಡ ಓದುವಂಥ ಮಟ್ಟಕ್ಕೆ ಸರ್ಕಾರದ ಯೋಜನೆಗಳು ಜಾರಿಗೆ ತರಬೇಕು ಎಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

Sri H.N. Nanje Gowda : I would like to draw your attention to.....

ಅಧ್ಯಕ್ಷರು : ಇಲ್ಲ, ಇಲ್ಲ, ಕಂಟಿನ್ಯೂ ಮಾಡುತ್ತಾರೆ. ಅವರಿಗೆ 5 ನಿಮಿಷಗಳು ಬೇಕು. ಕಂಟಿನ್ಯೂ ಮಾಡಿದ ಮೇಲೆ ಪ್ರೆಸೆಂಟ್ ಮಾಡುತ್ತೀರಾ? let him close.

Sri H.N. Nanje Gowda : When the House is not in order....

Mr. Speaker : The House is in order. I am convinced about it. If you are on a point of order, I would ask him to yield.

ಶ್ರೀ ಕೆ.ಎನ್. ನಾಗೇಗೌಡ : ಬೇಕಾದಷ್ಟು ಕಡೆ ಧರಣಿ ನಡೆದಂಥ ಕಾಲದಲ್ಲಿ ಹೌಸ್ ಈಸ್ ಇನ್ ಆರ್ಡರ್ ಅಂತ ಬೇಕಾದಷ್ಟು ರೂಲಿಂಗ್ಸ್ ಇದೆ. ಆ ರೂಲಿಂಗ್ಸ್ ಪ್ರಕಾರ ಹೌಸ್ ಈಸ್ ಇನ್ ಆರ್ಡರ್.

Mr. Speaker : I have already spelt out, the House is in order. ಸನ್ಮಾನ್ಯ ಮುನಿಯಪ್ಪನವರು ಕಂಪ್ಲೀಟ್ ಮಾಡಲೀ If you want to have a say, I will ask Mr. Muniyappa to yield for a minute. ಹೇಗೆ ಮಾಡುತ್ತೀರಿ?

ಶ್ರೀ ಹೆಚ್.ಎನ್. ನಂಜೇಗೌಡ : ನಾನು ಹೇಳಿ ಬಿಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ನಾನು ಈ ಮೊದಲು ಕೆಲವು ಕಾಲ ಸಭೆಯಲ್ಲಿ ಇರಲಿಲ್ಲ. ನಮ್ಮ ರಾಜ್ಯದ ಒಬ್ಬ ಅಧಿಕಾರಿಗೆ ಹತ್ತೂ ಕಾಲೋ ಹತ್ತೂವರೆ ಗಂಟೆಯೊಳಗೇ ಅರೆಸ್ಟ್ ಆಗಿ ಅವರನ್ನು ಸುಪ್ರೀಂ ಕೋರ್ಟ್ ಆರ್ಡರ್ ಪ್ರಕಾರ.......

Mr. Speaker : Under what rule you are raising this?

Sri H.N. Nanje Gowda : I am trying to bring to your notice, the Article 167 sub-clause (b) and also Article 158....

Mr. Speaker : Right now the House is transacting some business guided by the rules. So, we are right now discussing the Demands. The hon. Member is on his feet Making his speech. I whould only like kto know what exactly hon. member Mr. Nanje Gowda wants to raise under what rules?

Sri H.N. Nanje Gowda : I am quoting the constitutional provision. Constitution overrides the rules. Rule is subservient to the constitution.

Mr. Speaker : Already Hon'ble Member Sri Mallikarjuna Kharge also insisted on this. I have only suggested that I am not disinclined to take up this matter for discussion. I should only be informed by way of a suitable notice from the Hon;ble Member whoever them wants to take up this matter for discussion. I shall examine them in relation to the rules that conducts the proceedings of this House, and then take up the matter accordingly. I am not against. I would only like to be educated because let us not lay down new precedants. We have right now taken up discussion on Demands. He is on his feet. So, Kindly bear with me, you are the seniormost Member of this House. The House has a very high regards for your parliamentary standing. Kindluy enlighten me as to how I should go further.

ಶ್ರೀ ಹೆಚ್. ಎನ್. ನಜೇಗೌಡ : ಮಾನ್ಯ ಸಭಾಧ್ಯಕ್ಷರೆ, ಇಂಥ ಪ್ರಾವಿಷನ್ ಎಂದು ಹೇಳುವುದಕ್ಕಾಗುವುದಿಲ್ಲ, By convention what I am telling is, ಒಂದು ಸಂಪ್ರದಾಯ ಏನೆಂದರೆ, ಸದಸ್ಯರನ್ನು ಧರಣಿ ಕೂರಿಸಿಕೊಂಡು...

Mr. Speaker : I am glad you have answered my point very intelligently. You are not on any specific rule. I whould only request you to befit the

reputation which you enjoyed in this House for your parlimentary standing to serve a notice on this office; give me sufficient opportunity to read that; to acquaint my self and then post the matter for discussion. The Chair is not disinclined to take up this matter for discussion at all. I am with a very fair mind and I am open for discussion. But, let me do it in accordance with the rules that is in force. Let me not arbitrarily take this House to my fanci.

Sri H.N. Nanje Gowda : I am not advising like that also.

Mr. Speaker : I am sure, you would be the last person to do it.

Sri H.N. Nanje Gowda : My only submission is, when the Hon'ble Members stay in Dharna it is not the convention in this House and elsewhere also, to transact any business.

Mr. Speaker : I have concern for my Hon'ble Members in the House. But, I have more concern for the business of the House. This matter was taken up; they had staged a walk-out; this matter was brought before the House and the Chair had given its ruling and they preferred to go out. Again they have come here. They are on Dharna. There are sufficiant Rulings, given in the past by my predecessors that when there is Dharna the House is presumed to be in order. Therefore, there is an impending demand that I should get these demands voted and take up the other demands for discussion because that is the concern of the whole House. We have taken up 7 Subject Committee Reports for the consideration of the House. So, by now, we have already lost very valuable hours. I am not inclined to lose any further time that is very valuable both for the Hon'ble Members and for the House. I appeal to you to kindly drop this matter at this stage and enable the Hon'ble Member who is on his feat to continue discussion. So, it is my sincere appeal to you.

Sri H.N. Nanje Gowda : So, if you say that by sitting in Dharna in order I will also sit in Dharna, whatever be the case.

Mr. Speaker : I would not say that you should not join your Hon'ble brethren who are in the well. I would never say that. But, I would appeal to you.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ನನಗೇನು ಅನ್ನಿಸುತ್ತದೆಂದರೆ, ವಿಷಯ ಸಮಿತಿಗಳ ವರದಿಗಳಿವೆ ಅದಕ್ಕಿಂತ ಇದು ಹೆಚ್ಚಿಗೆ ಪ್ರಾಮುಖ್ಯವಾದ ವಿಚಾರ. ವಾಸ್ತಾವಿಕವಾಗಿ we should have discussed this matter through an adjournment motion. As soon as we came to know this we should have given

an adjournment motion notice and then we should have taken this Of course, I don't know, whether it is the prerogative of the Hon'ble Speaker to convert our oral submissions also as adjournment notices. Then, it is the prerogative of the Hon'ble Speaker. So, what I thought was, this is a most serious matter because according to me, I was going through the Constitutional provisions. There is no Government. We have to transact business in this House.

Mr. Speaker : Mr. Y. Ramakrishna, who is a seniormost Member, who had been the Law and Parliamentary Affairs Minister thought it fit that he should entrust this responsibility to you to defend this weak case and quietly he preferred to sit in the well, and he is enjoying the fun; he knows you have a very bad case. But, I am only wondering as to how an eminent parliamentarian like you could prefer to take up this weak case. Either they are not following your order or....

Sri H.N. Nanje Gowda : Definitely no.

(Interruptions)

Mr. Speaker : I am glad, all of you are coming back to your seats. If the leader and the Deputy leader come back to their seats it is as good as all of them have come. If they do not come, they are indulging in indiscipline. Now, all the Hon'ble Members will have to follow your leader.

(At this stage, the Hon'ble leader and the Deputy leader were moving towards their seats along with their Members)

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ಸಂತೋಷ ಎಂದರೆ ತಾವು ಇವತ್ತು ನಗುತ್ತಿದ್ದೀರಲ್ಲ ಅದೇ ಒಂದು ಸಂತೋಷ ನಮಗೆ. ಕೊನೆಗೆ ನಮ್ಮನ್ನು ನಗಿಸುವುದರಲ್ಲಿ ಯಶಸ್ವಿಯಾಗಿದ್ದೀರಿ.

ಒಬ್ಬ ಮಾನ್ಯ ಸದಸ್ಯರು : ಅವರು ನಗುವುದಕ್ಕಿಂತ ಹೆಚ್ಚಾಗಿ ನಮ್ಮನ್ನು ನಗಿಸುತ್ತಿದ್ದಾರೆ. ಅದು ಇನ್ನೂ ಬಹಳ ಸಂತೋಷ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಹೇಳಿದ್ದುದು ಸರಿ ಇದೆ. ಇವತ್ತು ಏನಾಗಿದೆ ಎಂದರೆ ಯಾವ ವಾಸುದೇವನ್ ಅವರು ಜೈಲಿಗೆ ಹೋದರು ಆ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಯಾವುದೇ ರೂಲ್ಸ್‌ನಲ್ಲಿ ಅವಕಾಶ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು : ವಾಸುದೇವನ್ ಇದ್ದದ್ದೇ ಜೈಲಿನಲ್ಲಿ.....

(ಮಾನ್ಯ ಈಶ್ವರಪ್ಪನವರು ಈ ಹಂತದಲ್ಲಿ ವೆಲ್‌ನಿಂದ ಮಾತನಾಡಿದರು)

ಒಬ್ಬ ಮಾನ್ಯ ಸದಸ್ಯರು : ದಯವಿಟ್ಟು ಮಾನ್ಯ ಸದಸ್ಯರು ತಮ್ಮ ಸೀಟಿನಲ್ಲಿ ಕುಳಿತು ಮಾತನಾಡಲಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ತಮ್ಮ ಮನಸ್ಸಿಗೆ ನೋವು ಮಾಡಬೇಕೆಂದು ನನಗೆ ಇಚ್ಛೆ ಇಲ್ಲ ಅಧ್ಯಕ್ಷರೆ. ನಾವೇ ಮಾಡಿಕೊಂಡಿತಕ್ಕ ಸದನದ ನಿಯಮಾವಳಿಗಳನ್ನು ಮುರಿಯಬೇಕು ಎನ್ನುವ ಅಪೇಕ್ಷೆ ನಮಗಿಲ್ಲ.

(ಗೊಂದಲ)

ಶ್ರೀ ಎಸ್. ಕೃಷ್ಣಪ್ಪ : ಸಭೆ ನಡೆಯುವಾಗ ಸದಸ್ಯರು ಮಾತನಾಡುತ್ತಿದ್ದಾಗ ಅಡಚಣೆ ಮಾಡಿ ಮಾತನಾಡತಕ್ಕದ್ದು ಸರಿಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನ ಅನುಭವದಲ್ಲಿ, ನಮ್ಮ ರಾಜ್ಯದ ದೇಶದ ಇತಿಹಾಸದಲ್ಲಿ ಅಪೂರ್ವವಾದ ಒಂದು ವಿಶೇಷವಾದ ನಾಡಿನ ಜನರೆಲ್ಲ ತಲೆತಗ್ಗಿಸುವಂತಹ ಘಟನೆ ನಡೆದಿದೆ. ಅದಕ್ಕೆ ಯಾರು ಜವಾಬ್ದಾರರು ಎನ್ನುವುದಕ್ಕಿಂತ ಹೆಚ್ಚಾಗಿ ನಾನು ಏನು ಹೇಳುತ್ತೇನೆಂದರೆ, ಇವತ್ತು ತಮಗೆ ಅಧಿಕಾರ ಇದೆ, ತಮಗೆ ನಾವು ಸಾರ್ವಭೌಮ ಅಧಿಕಾರ ಕೊಟ್ಟಿದ್ದೇವೆ. ವಿಶೇಷ ಸಂದರ್ಭ ಬಂದಾಗ ಎಲ್ಲಾ ರೂಲ್ಸ್‌ನ್ನು ಸಸ್ಪೆಂಡ್ ಮಾಡಿ ತಾವು ಸರಿ ಎಂದು ಕಂಡರೆ ನಮಗೆ ಅವಕಾಶ ಕೊಡುವುದಕ್ಕೆ ತಮಗೆ ಅಧಿಕಾರ ಇದೆ. ನಾವು ಇಲ್ಲಿ ಬಂದ ತಕ್ಷಣ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾಗ ಅವರಿಗೆ ಈಲ್ಡ್ ಆಗಿ ಎಂದು ರಿಕ್ವೆಸ್ಟ್‌ಮಾಡಿಕೊಂಡು ಇದೊಂದು ವಿಶೇಷ ಸಂದರ್ಭವಾದುದರಿಂದ ಸದನದ ಕಾರ್ಯಕಲಾಪಗಳು ಈ ಸಂದರ್ಭದಲ್ಲಿ ಮುಂದುವರಿಯುವುದು ಸರಿಯಲ್ಲ. ಒಬ್ಬ ಪ್ರಾಮಾಣಿಕ ಅಧಿಕಾರಿ ಸರ್ಕಾರದ ತಪ್ಪಿನಿಂದ ಜೈಲಿಗೆ ಹೋಗಿರುವಂತ ವಿಶೇಷ ಸಂದರ್ಭ ಇರುವಾಗ ಅವರು ಅಧಿಕಾರದಲ್ಲಿ ಮುಂದುವರಿಯುವ ನೈತಿಕ ಹಕ್ಕನ್ನು ಕಳೆದುಕೊಂಡ ಕಾಲದಲ್ಲಿ ಅವರು ರಾಜೀನಾಮೆ ಕೊಟ್ಟು ಹೋಗಬೇಕಾಗಿತ್ತು. ಇದು ನಡೆಯಬಾರದು. ಈ ಹಿನ್ನೆಲೆಯಲ್ಲಿ ನಾವು ಮಾನ್ಯ ರಾಜ್ಯಪಾಲರನ್ನು ಸಹ ಭೇಟಿ ಮಾಡಿ ಈ ಸರ್ಕಾರ ರಾಜೀನಾಮೆ ಕೊಡಬೇಕೆಂದು ಒತ್ತಾಯ ಮಾಡಲು ರಾಜ್ಯ ಪಾಲರನ್ನು ಭೇಟಿ ಮಾಡುತ್ತಿದ್ದೇವೆ. ಈ ಸಂದರ್ಭದಲ್ಲಿ ನಾವು ಧರಣಿ ಕುಳಿತುಕೊಳ್ಳುವುದು ಸೂಕ್ತವೆಂದು ನಾವು ತೀರ್ಮಾನ ಮಾಡಿದ್ದೇವೆ.

ಶ್ರೀ ಕೆ.ಎನ್. ನಾಗೇಗೌಡ : ಪಾಯಿಂಟ್ ಆಫ್ ಆರ್ಡರ್.......

(ಗೊಂದಲ)

(ಶ್ರೀ ಈಶ್ವರಪ್ಪನವರು ವೆಲ್‌ನಿಂದ ಮಾತನಾಡಿದರು)

ಅಧ್ಯಕ್ಷರು : ಈಶ್ವರಪ್ಪನವರೇ, ತಾವು ಬರೀ ಶಾಸಕರಲ್ಲ. ನಿಮ್ಮ ರಾಜಕೀಯ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು. ತಾವು ದಯವಿಟ್ಟು ಕುಳಿತುಕೊಳ್ಳಿ, ಇಲ್ಲ ತಮ್ಮ ಸ್ಥಾನಕ್ಕೆ ಬನ್ನಿ.

ಶ್ರೀ ಕೆ.ಎನ್. ನಾಗೇಗೌಡ : ನನ್ನ ಕ್ರಿಯಾಲೋಪ ಏನೆಂದರೆ, ನಮಗೆ ಎಲ್ಲರಿಗೂ ರೂಲ್ಸ್ ಇದೆ. ಯಾವ ವಿಚಾರ ಬೇಕಾದರೂ ವಿರೋಧ ಪಕ್ಷದವರು ಯಾರು ಯಾವಾಗ ಬೇಕಾದರೂ ಎತ್ತಬಹುದೆ? ಸರ್ಕಾರ ಇದೆಯೋ ಇಲ್ಲವೋ ಎಂದು ಹೇಳುವುದಕ್ಕೆ ತಾವು ಇದ್ದೀರಿ, ಎಲ್ಲ ಲೀಡರ್‌ಗಳು ಇದ್ದಾರೆ. ಬೇಡಿಕೆಗಳ ಮೇಲೆ ಚರ್ಚೆ ನಡೆಯುವಾಗ ಮಾನ್ಯ ನಂಜೇಗೌಡರಂತಹ ಸೀನಿಯರ್ ಪಾರ್ಲಿಮೆಂಟೇರಿಯನ್ ಅಡ್ಜರ್ನಮೆಟ್ ಮೋಷನ್ ಅನ್ನು ಎಲ್ಲ ವಿಷಯಗಳನ್ನು ಸಸ್ಪೆಂಡ್ ಮಾಡಿ ತೆಗೆದುಕೊಳ್ಳಿ ಎಂದು ಹೇಳತಕ್ಕದ್ದನ್ನು ನಾನು ಅವರಿಂದ ನಿರೀಕ್ಷಿಸಿರಲಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಅದನ್ನು ಹೇಳಲಿಲ್ಲ. ಅದೇನು ಪಾಯಿಂಟ್ ಆಫ್ ಆರ್ಡರ್?

ಶ್ರೀ ಕೆ.ಎನ್. ನಾಗೇಗೌಡ : ಜೋರಾಗಿ ಮಾತನಾಡುವುದರಿಂದೇನು ಪ್ರಯೋಜನವಿಲ್ಲ.

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ : ಈ ರೂಲ್ಸ್‌ನ್ನು ವೈಯಲೇಟ್ ಮಾಡಿ ಹೋದರೆ ನಮಗೆ ಯಾರಿಗೂ ಅದು ಗೌರವ ತರತಕ್ಕದ್ದಲ್ಲ.

(ಗೊಂದಲ)

ಶ್ರೀ ಕೆ.ಎನ್.ನಾಗೇಗೌಡ : ಸುಪ್ರೀಂ ಕೋರ್ಟ್ ಆದೇಶವನ್ನು ಪಾಲನೆಮಾಡಬೇಕು. ಈ ಹೌಸ್ ರೂಲ್ಸ್ ಪ್ರಕಾರ ನಡೆಯಬೇಕು.

(ಗೊಂದಲ)

(ಶ್ರೀ ನಾಗೇಗೌಡರು ಮತ್ತು ಶ್ರೀ ಯಡಿಯೂರಪ್ಪನವರು ಈ ಹಂತದಲ್ಲಿ ಒಟ್ಟಿಗೇ ಮಾತನಾಡತೊಡಗಿದರು)

ಶ್ರೀ ಕೆ.ಎನ್. ನಾಗೇಗೌಡ : ಯಾವ ರೂಲ್ಸ್ ಇವರು ಯಾವಾಗ ಬೇಕಾದರೂ ಧರಣಿ ಕುಳಿತುಕೊಳ್ಳಬಹುದು, ಯಾವಾಗ ಬೇಕಾದರೂ ಸಭಾತ್ಯಾಗ ಮಾಡಬಹುದು. ಇದಕ್ಕೆ ರೂಲ್ಸ್ ಏಕೆ ಬೇಕು?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ದೇಶದ ಇತಿಹಾಸದಲ್ಲೇ ನಡೆದಿರಲಿಲ್ಲ ಇಂಥ ಘಟನೆಗಳು. ಅದಕ್ಕಾಗಿ ಅನಿವಾರ್ಯವಾಗಿ ನಾವು ಧರಣೆ ಕುಳಿತುಕೊಳ್ಳುತ್ತಿದ್ದೇವೆ ಸನ್ಮಾನ್ಯ ಅಧ್ಯಕ್ಷರೆ, ತಾವು ಅಧ್ಯಕ್ಷರಾಗಿ ತಮಗೆ ಗೊತ್ತಿದೆ. ನಾನು ನಿಮ್ಮನ್ನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ರೂಲ್ಸನ್ನು ಸಸ್ಪೆಂಡ್ ಮಾಡಿ. ಇವತ್ತು ಒಂದು ದಿನ ಚರ್ಚೆ ಮಾಡುವುದಕ್ಕೇನಿದೆ? ನಿಜವಾಗಿಯೂ ಸರಿ. ನಾವು ಬೇರೆ ಸಮಯದಲ್ಲಿ ನೋಟೀಸ್ ಕೊಟ್ಟು ಚರ್ಚೆ ಮಾಡುವುದಕ್ಕೆ ಸುಪ್ರೀಂ ಕೋರ್ಟ್ ಡಿಸಿಷನ್ ಮೇಲೆ ಚರ್ಚೆ ಮಾಡುವುದಕ್ಕೆ ನಮಗೇನಿದೆ? ಅವರು ಜೈಲಿಗೆ ಹೋಗಿರುವ ಬಗ್ಗೆ ಮತ್ತೆ ಚರ್ಚೆ ಮಾಡಿ ಪರಿಹಾರ ಹುಡುಕುವುದಕ್ಕೆ ಎಲ್ಲಿ ಅವಕಾಶ ಇದೆ? ಅವಕಾಶ ಎಲ್ಲಿದೆ ಸಾರ್ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ?

ಶ್ರೀ ಜೆ.ಹೆಚ್. ಪಟೇಲ್ : ಪುನಃ ಸರ್ಕಾರದ ವತಿಯಿಂದ ಸ್ಪಷ್ಟನೆ ನೀಡುತ್ತಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಹಿರಿಯ ಸದಸ್ಯರುಗಳು ಇವತ್ತು ಆಗಿರತಕ್ಕ ಘಟನೆ ಬಗ್ಗೆ ಪ್ರಸ್ತಾಪ ಮಾಡಬೇಕು, ಚರ್ಚೆ ಮಾಡಬೇಕು ಎಂದು ಕೇಳಿದ್ದಾರೆ. ನಾನು ನಡೆದಿದ್ದ ಘಟನೆಯನ್ನು ಸದನಕ್ಕೆ ವರದಿ ಮಾಡಿದ್ದೇನೆ. ಅದರ ಬಗ್ಗೆ ಕಾರಣ ಏನು, ಮೆರಿಟ್. ಏತಕ್ಕೆ ಹೀಗಾಯಿತು, ಆ ಜಡ್ಜ್‌ಮೆಂಟ್ ಏತಕ್ಕೆ ಬಂತು-ಇದರ ಬಗ್ಗೆ ಇವತ್ತು ಪ್ರಸ್ತಾಪ ಬೇಡ. ಅದಕ್ಕೆ ನಾನು ಹೇಳಿದೆ, ಮಾನ್ಯ ಮುಖ್ಯಮಂತ್ರಿಗಳು ನಾಳೆ ಬೆಳಿಗ್ಗೆ ಬರುತ್ತಾರೆ. ಇಷ್ಟಂತೂ ತಮಗೂ ಅರ್ಥ ಆಯಿತು. ನನಗೂ ಅರ್ಥ ಆಯಿತು. ಈ ಎಲ್ಲಾ ಮಾನ್ಯ ಸದಸ್ಯರುಗಳು ನಮ್ಮ ಒಬ್ಬ ಪ್ರಾಮಾಣಿಕ ಅಧಿಕಾರಿಗೆ ಶಿಕ್ಷೆ ಆಗಬಾರದಿತ್ತು...ಆ ಕಾರಣ ಸರ್ಕಾರದ ಮೇಲೆ ಹಾಕಿಕೊಳ್ಳಲಿ. ಅವರ ಮನಸ್ಸಿನಲ್ಲಿರುವುದು ಅವರಿಗೆ ಈ ಶಿಕ್ಷೆ ಆಗಬಾರದು ಎಂದು ನೀವು ಕಾರಣವನ್ನು ನಮ್ಮ ಮೇಲೆ ಹಾಕಿ ನಮ್ಮನ್ನು ಬೈಯಿರಿ. ಆ ಮಾತು ಬೇರೆ.

ನಿಮ್ಮ ಉದ್ದೇಶ ಹಾಗಾಗಬಾರದಿತ್ತು ಎಂಬುದು. ನಾನೂ ಅದನ್ನೇ ಹೇಳಿದ್ದು. ಸರ್ಕಾರವೂ ಇವತ್ತು, ನಮ್ಮ ಮುಖ್ಯಮಂತ್ರಿಗಳೇ ಇಂಥ ಒಂದು ಅನಾಹುತ This is a very great accident in the process of running a Government.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಾರಣ ಯಾರು?

ಶ್ರೀ ಜೆ.ಹೆಚ್. ಪಟೇಲ್ : ಅದಕ್ಕೇ ನಮ್ಮ ಮುಖ್ಯಮಂತ್ರಿಗಳು ಮೂರು ದಿವಸ ದೆಹಲಿಯಲ್ಲಿ ಕುಳಿತು, ಇದರಲ್ಲಿ ಸೀಕ್ರೆಟ್ ಯಾವುದೂ ಇಲ್ಲ, ರಾಷ್ಟ್ರಪತಿ, ಪ್ರಧಾನಮಂತ್ರಿ ಗೃಹಮಂತ್ರಿ, ಕಾನೂನು ಮಂತ್ರಿ, ಸುಪ್ರೀಂ ಕೋರ್ಟ್ ಚೀಫ್ ಜಸ್ಟೀಸ್ ಇವರೆಲ್ಲರನ್ನೂ ಕಂಡು ಇಂಥ ಒಂದು ಅನ್ಯಾಯ ಆಗಬಾರದು ಎನ್ನುವುದಕ್ಕೋಸ್ಕರ, ಪ್ರಾಮಾಣಿಕ ಪ್ರಯತ್ನ ಪಡುವುದಕ್ಕೋಸ್ಕರವೇ ಸರ್ಕಾರದ ಮುಖ್ಯಸ್ಥರಾಗಿರತಕ್ಕ ಮುಖ್ಯಮಂತ್ರಿಗಳೇ....

ಶ್ರೀ ಬಿ.ಎಸ್. ಯಡಿಯೂರಪ್ಪ : ಪ್ರಯತ್ನ ಅಲ್ಲ, Because he is guilty, because he is responsible.....

(ಹಲವಾರು ಸದಸ್ಯರು ಒಟ್ಟಿಗೆ ಮಾತನಾಡುತ್ತಿದ್ದರು. ಯಾವುದೂ ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ, ಗೊಂದಲಮಯ ವಾತಾವರಣ ಸಭೆಯಲ್ಲಿತ್ತು.)

ಶ್ರೀ ಎನ್. ರಾಜಣ್ಣ : ಅಲ್ಲ ಸ್ವಾಮಿ, ಮುಖ್ಯಮಂತ್ರಿಗಳು ಡೆಲ್ಲಿಯಲ್ಲಿ ಮೂರು-ನಾಲ್ಕು ದಿವಸ ಸತತವಾಗಿ ಪ್ರಯತ್ನ ಮಾಡುತ್ತಿದ್ದಾರೆ. ಇದು ನಿಮಗೆಲ್ಲಾ ಗೊತ್ತಿದ್ದರೂ ಈ ರೀತಿ ಮಾತುಗಳನ್ನೆಲ್ಲಾ ಏತಕ್ಕೆ ಆಡುತ್ತೀರಿ? ದಯವಿಟ್ಟು ಅವರ ಕುರ್ಚಿಯ ಮೇಲೆ ಕುಳಿತುಕೊಂಡು ಮಾತನಾಡಲಿ. I request the Speaker to see the decorum of the House is maintained.

ಶ್ರೀ ಜೆ. ಹೆಚ್. ಪಟೇಲ್ : ನಾನು ಹೇಳುತ್ತಾ ಇರುವುದು,ಈ ವಿಷಯದಲ್ಲಿ ಏನಾದರೂ ಸರ್ಕಾರದ ಹೊಣೆಗಾರಿಕೆ ಇದ್ದರೆ ಅದನ್ನು ಅವರು ಕೇಳುವ ಪ್ರಶ್ನೆಗಳಿಗೆ ಉತ್ತರಿಸುವುದಕ್ಕೆ ನಾವು ಹಿಂಜರಿಯುವುದಿಲ್ಲ. ಯಾವುದೇ ಡೀಟೈಲ್ಸ್ ಬೇಕಾದರೆ ಚರ್ಚೆ ಮಾಡೋಣ. ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಒಬೇ ಮಾಡಿದ್ದೇವೆ.

Mr. Speaker : I am only unused at the conglomeration of the veteran Advocate in trying to find some rules:

ಶ್ರೀ ಜೆ.ಹೆಚ್. ಪಟೇಲ್ : ಕಾನ್‌ಸ್ಟಿಟ್ಯೂಷನ್ ತೆಗೆದುಕೊಂಡು ಬಂದು ಕಾನ್‌ಸ್ಟಿಟ್ಯೂಷನ್ ಪ್ರಾವಿಷನ್ನನ್ನು ಮಾನ್ಯ ನಂಜೇಗೌಡರು ಹೇಳುತ್ತಿದ್ದರು. ಅದೇ ಕಾನ್‌ಸ್ಟಿಟ್ಯೂಷನ್ ಪ್ರಾವಿಷನ್ ಒಳಗೇ ರೂಲ್ಸ್ ಆಫ್ ಪ್ರೊಸೀಜರ್‌ನ್ನು ಮಾಡಿಕೊಂಡಿರುವುದು. ನಾವು ದಿವಸ ಕಾನ್‌ಸ್ಟಿಟ್ಯೂಷನ್ ತೆಗೆದುಕೊಂಡು ಬಂದು ಆರ್ಟಿಕಲ್ ಎಲ್ಲಾ ಹೇಳಿ ಮಾಡುವುದಕ್ಕಾಗುವುದಿಲ್ಲ ಎಂದು It is for implementing of the constitutional responsibilities we have got. ನಾನು ಇಷ್ಟೇ ಹೇಳುತ್ತೇನೆ. ಯಾವುದೇ ವಿಷಯಗಳಿಗೆ, ವಿವರಗಳಿಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಅಥವಾ ಅದರ ತೀರ್ಪಿಗೆ ಹೊರತಾಗಿ ಈ ಸದನದ ನಿಯಮಾವಳಿಗಳಿಗೆ ಹೊರತಾಗಿ ನಾವು ಪ್ರಶ್ನೆಗಳನ್ನು ಎತ್ತಬಾರದು. ಆದ್ದರಿಂದ ಮತ್ತೆ ನಾನು ಎಲ್ಲಾ ಮಾನ್ಯ ಸದಸ್ಯರುಗಳಿಗೆ ಹೇಳುವುದೇನೆಂದರೆ, ಈಗ ಬೇಡಿಕೆ ಬಹಳ ಮುಖ್ಯ ಅಲ್ಲವೆ? ಸದನದಲ್ಲಿ ಯಾವಾಗ ಎಮರ್ಜೆನ್ಸಿ ಮೋಷನನ್ನು ಸ್ಪೀಕರ್ ಅವರೇ ತರುತ್ತಾರೆ,ನಾನು ಎಲ್ಲೋ ಒಂದೆರಡು ಸಾರಿ ಮಾತ್ರ ನೋಡಿದ್ದೇನೆ. ಎಮರ್ಜೆನ್ಸಿ ಅಂದರೆ ನ್ಯಾಷನಲ್ ಎಮರ್ಜೆನ್ಸಿಯಂಥವು, ಭಾರಿ ಅನಾಹುತಗಳು, ಪ್ರಕೃತಿಯ ಅಥವಾ ಯುದ್ಧ ಘೋಷಣೆ-ಇಂಥ ಸಮಯದಲ್ಲಿ ಇದ್ದಕ್ಕಿದ್ದಹಾಗೆ ನಿಲ್ಲಿಸಿಬಿಟ್ಟು

ಸ್ಪೀಕರ್ ಅವರು ಸದನದಲ್ಲಿ ಚರ್ಚೆಗೆ ಅಲೋ ಮಾಡುತ್ತಾರೆ. ಈಗ ಕಳೆದ ಒಂದು ವಾರದಿಂದ ಬೇಡಿಕೆಗಳ ಮೇಲೆ ಅವರೇ ಮಾನ್ಯ ಸದಸ್ಯರುಗಳು ಕೇಳಿರುವ ಹಲವಾರು ಪ್ರಶ್ನೆಗಳಿಗೆ ಉತ್ತರ ಹೇಳಬೇಕು, ನಾವು ನಮ್ಮ ಬೇಡಿಕೆಗಳನ್ನು ಪಾಸ್ ಮಾಡಿಕೊಳ್ಳಬೇಕು. ಅದು ಮುಗಿಸಿಕೊಂಡ ಮೇಲೆ ಅದಕ್ಕೇ ಹೇಳುತ್ತೇನೆ, ನಾಳೆ ಬೆಳಗ್ಗೆ ಮುಖ್ಯಮಂತ್ರಿಗಳು ಬರುತ್ತಾರೆ, ಅವರು ಬಂದ ತಕ್ಷಣ ಏನು ವಿಷಯ ಎಂದು ವರದಿ ಮಾಡುತ್ತಾರೆ, ಆಮೇಲೆ ಯಾವುದನ್ನು ಚರ್ಚೆ ಮಾಡಬೇಕು ಬಿಡಬೇಕು ಎಂಬುದನ್ನು ಬೇಕಾದರೆ ತಾವು ತಮ್ಮ ಕೊಠಡಿಗೆ ಕರೆಸಿದರೆ ಮಾತನಾಡಬಹುದು. ಕೆಲವು ವಿಷಯಗಳನ್ನು ನಾವು ಸದನದಲ್ಲಿ ಚರ್ಚೆ ಮಾಡುವುದು ಕಷ್ಟ ಇದೆ. ಮಾನ್ಯ ನಂಜೇಗೌಡರಿಗೆ ಗೊತ್ತಿದೆ. ಏತಕ್ಕೆ ಈ ತರಹ ಮಾಡುತ್ತಾರೆ? ಬೆಳಿಗ್ಗೆ ವಾಕ್ ಔಟ್ ಮಾಡಿದಿರಿ. ಮಾನ್ಯ ಯಡಿಯೂರಪ್ಪನವರಿಗೆ ನಾನು ಇಷ್ಟೇ ಪ್ರಶ್ನೆ ಕೇಳುವುದು. ತಾವು ವಿರೋಧ ಪಕ್ಷದ ನಾಯಕರು. ಸಭಾ ನಾಯಕರು ಅಥವಾ ನಾವು ಇಲ್ಲಿ ಸರ್ಕಾರದ ಪರವಾಗಿ ಯಾರು ನಿಂತು ಎಷ್ಟು ಜವಾಬ್ದಾರಿಯಿಂದ ಹೇಳುತ್ತೇವೋ ಅದಕ್ಕಿಂತ ಹೆಚ್ಚು ಜವಾಬ್ದಾರಿ ಇರಬೇಕು ಸರ್ಕಾರದ ವಿರುದ್ಧ ಹೇಳುವವರಿಗೆ. ಅದಕ್ಕೆ An ounce of responsibility by the ruling party should be equal to one ton of Opposition's responsibility. ಆಮೇಲೆ ತಾವು ಏನಾದರೂ ಸಲಹೆ ಕೊಟ್ಟರೆ.....

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ಒಂದು ಟನ್‌ನಷ್ಟು ಜವಾಬ್ದಾರಿ ನಮ್ಮದು ಏನಿದೆ ಎಂದು ಹೇಳಿದ್ದೀರಲ್ಲ, ಇಂಥ ವಿಶೇಷವಾದ ಸಂದರ್ಭದಲ್ಲಿ ಸದನದ ಕಾರ್ಯಕಲಾಪಗಳು ನಡೆಯುವುದಕ್ಕೆ ವಿರೋದಫಕ್ಷದ ನಾಯಕರಾಗಿ ಬಿಟ್ಟರು ಎಂಬುದೇ ಅಕ್ಷಮ್ಯ ಅಪರಾಧವಾಗಬಹುದು, ಮುಂದಿನ ಪೀಳಿಗೆ ಶಪಿಸಬಹುದು. ಅದಕ್ಕೆ ನಾನು ಹೇಳುತ್ತಿದ್ದೇನೆ, ಸದನದ ಕಾರ್ಯಕಲಾಪ ಮುಂದೂಡಬೇಕು ಎಂದು. ರೂಲ್ಸ್ ಏತಕ್ಕೋಸ್ಕರ ಮಾಡಿಕೊಂಡಿರುವುದು?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವ ರೂಲ್ಸ್ ಅಡಿಯಲ್ಲಿ ಮಾಡಬಾರದ್ದೆಲ್ಲಾ ಮಾಡಿಬಿಟ್ಟು ಅದರಿಂದ ಒಬ್ಬ ಪ್ರಾಮಾಣಿಕ ಅಧಿಕಾರಿಗಿ ಶಿಕ್ಷೆಯಾಗಿದೆ. ಅವರ ಬದಲು ನೀವು ಜವಾಬ್ದಾರರು.

ಶ್ರೀ ಜೆ.ಹೆಚ್. ಪಟೇಲ್ : ಈಗ ಹೊಳೆದಿದೆ ಅವರಿಗೆ. ಯಾವ ಇಷ್ಯೂನಲ್ಲಿ ಇದೆ ಅದಲ್ಲ ಅವರಿಗೆ. ಸದನದ ಕಾರ್ಯಕಲಾಪ ನಡೆಯಭಾರದು ಅವರಿಗೆ. ನಾವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಶಿಕ್ಷೆ ನಾನು ಅನುಭವಿಸುತ್ತೇನೆ ಎಂದು ಅರ್ಜಿ ಹಾಕಿ ನೀವು ಹೋಗಿ. ಆಗ ನಾನು ಒಪ್ಪುತ್ತೇನೆ ನಿಮ್ಮನ್ನು.

ಶ್ರೀ ಡಿ.ಟಿ. ಜಯಕುಮಾರ್ : ಅಧ್ಯಕ್ಷರೇ, ಈಗ ಅವರಿಗೆ ಫೋರ್ ಥಾಟ್ ಆಗಿದೆ. ಈಗ ಅವರಿಗೆ ಹೊಳೆದಿದೆ. ಅದಕ್ಕೆ ಮತ್ತೆ ಬಂದು ಧರಣಿ ಕುಳಿತಿದ್ದಾರೆ.

Mr. Speaker : It is after thought.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಭಾಧ್ಯಕ್ಷರೇ, ವಾಕ್ ಔಟ್ ಮಾಡಿದಂಥ ಉದ್ದೇಶ, ಇದು ಸದನದಲ್ಲಿ ಚರ್ಚೆ ಮಾಡಬೇಕು, ಮುಂದಿನ ಕಾರ್ಯತಂತ್ರ ರೂಪಿಸಬೇಕು ಎಂದು ಹೋದೆವು. ನಾವು ತಿಳಿದುಕೊಂಡಿದ್ದೆವು, ತಾವು ನಮ್ಮನ್ನು ತಮ್ಮ ಕೊಠಡಿಗೆ ಕರೆಯಬಹುದು, ಚರ್ಚೆ ಮಾಡಬಹುದು ಎಂದು ಭಾವಿಸಿದ್ದೆವು. ಸರ್ಕಾರ ಒಪ್ಪಿಕೊಳ್ಳದಿದ್ದರೆ ನೀವು ಹೇಗೆ ಕರೆಯುತ್ತೀರಿ ಕೊಠಡಿಗೆ? ಅಧ್ಯಕ್ಷರು ಕೊಠಡಿಗೆ ಕರೆಯಲಿಲ್ಲ, ಕಾರ್ಯಕಲಾಪ ಮುಂದುವರೆಯುತ್ತಿದೆ ಎಂಬುದು ಆಗಬಾರದು

ಎಂಬ ದೃಷ್ಟಿಯಿಂದ ನಮ್ಮ ಡ್ಯೂಟಿ ಮಾಡುವುದಕ್ಕೋಸ್ಕರ ನಾವು ಧರಣಿ ಕುಳಿತಿದ್ದೇವೆ. ರೂಲ್ಸ್ ಏನಿದೆ ಸ್ವಾಮಿ? ಈ ರೂಲ್ಸ್ ಎಲ್ಲಾ ನಾವು ಮಾಡಿಕೊಂಡಿರುವುದು. ನಾವು ಅಂದು ಕೊಂಡಿದ್ದೆವು. ನೀವು ನಿಮ್ಮನ್ನು ಕೊಠಡಿಗೆ ಕರೆಯಬಹುದು ಎಂದು. ನಾವು ವಾಕೌಟ್ ಮಾಡಿದ್ದೇವೆ, ನಮ್ಮ ಅಭಿಪ್ರಾಯ ಕೇಳಬಹುದು ಎಂದು ನಾವು ತಿಳುದುಕೊಂಡಿದ್ದೆವು. ನೀವು ಮಾಡುವುದಕ್ಕೆ ರೆಡಿಯಿದ್ದರೂ ಸರ್ಕಾರ ಕೇಳದಿದ್ದರೆ ನೀವು ಹೇಗೆ ಮಾಡುತ್ತೀರಿ? ನಾನು ನಿಮ್ಮ ಮೇಲೆ ಭಾರ ಹೊರಿಸುವುದಕ್ಕೆ ರೆಡಿ ಇಲ್ಲ, ನೀವು ನಗುತ್ತಾ ಇದ್ದೀರಿ, ಸಂತೋಷವಾಗಿದ್ದೀರಿ. ಆದರೆ ನಾವು ನಮ್ಮ ಕರ್ತವ್ಯ ಮಾಡುವುದಕ್ಕೋಸ್ಕರ ನಾವು ಧರಣಿ ಕುಳಿತುಕೊಳ್ಳುತ್ತಿದ್ದೇವೆ. ಬೇರೆ ಏನೂ ಅಲ್ಲ.

ಶ್ರೀ ಬಿ.ಆರ್. ಯಾವಗಲ್ : ಪಾಯಿಂಟ್ ಆಫ್ ಆರ್ಡರ್......

Mr. Speaker : Point of Order ಹೇಳಿ ಸನ್ಮಾನ್ಯ ಬಿ.ಆರ್. ಯಾವಗಲ್ ಅವರೆ.

ಶ್ರೀ ಬಿ.ಆರ್. ಯಾವಗಲ್ : ತಾವು ಈಗಾಗಲೇ ಈ ವಿಷಯದ ಮೇಲೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಎತ್ತಿದಮೇಲೆ ತೀರ್ಪು ನೀಡಿದ್ದೀರಿ. ಈಗ ಭಾಷಣದ ಮೂಲಕ ತಮ್ಮ ತೀರ್ಪನ್ನೇನಾದರೂ....

ಅಧ್ಯಕ್ಷರು : ಏನಿಲ್ಲ, ಏನೂ ಬದಲಾವಣೆ ಇಲ್ಲ.

ಶ್ರೀ ಬಿ.ಆರ್. ಯೂವಗಲ್ : ಹಾಗಿದ್ದರೆ It is not correct. It is against to rules.

Mr. Speaker : Point of Order upheld. Mr. B. Muniyappa called to speak.

ಶ್ರೀ ಬಿ. ಮುನಿಯಪ್ಪ : ಸನ್ಮಾನ್ಯ ಅಧ್ಯಕ್ಷರೇ, ಕಾರ್ಮಿಕ ಇಲಾಖೆ ಬಗ್ಗೆ.....

ಅಧ್ಯಕ್ಷರು : ಮುನಿಯಪ್ಪನವರೇ, ಒಂದು ನಿಮಿಷ. ಮಾನ್ಯ ರಾಮಕೃಷ್ಣ ಅವರೇ ತಮ್ಮದು ಪಾಯಿಟ್ ಆಫ್ ಆರ್ಡರಾ?

ಶ್ರೀ ವೈ. ರಾಮಕೃಷ್ಣ : ಪಾಯಿಂಟ್ ಆಫ್ ಆರ್ಡರ್ ಅಲ್ಲ, ಸಬ್‌ಮಿಷನ್.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ತಮ್ಮ ರೂಲಿಂಗ್ ಮೇಲೆ ಪಾಯಿಂಟ್ ಆಫ್ ಆರ್ಡರ್ ಅಂತ? ಈ ಹೌಸ್ ರೂಲ್ಸ್ ಪ್ರಕಾರ ನಡೆಯಬೇಕು ಎಂದು ನಾವು ಹೇಳುತ್ತಿದ್ದೇವೆ. ತಾವು ಹೌಸ್ ಆರ್ಡರ್‌ನಲ್ಲಿದೆ, ಮುನಿಯಪ್ಪನವರೇ ಮಾತನಾಡಿ ಎಂದು ಹೇಳಿದ್ದೀರಿ. ಅದರ ಮೇಲೂ ಪಾಯಿಂಟ್ ಆಫ್ ಆರ್ಡರಾ ಎಂದು ಹೇಳಿ. ಹೌಸ್‌ನಲ್ಲಿ ರೂಲ್ಸ್ ಇದೆ.

ಅಧ್ಯಕ್ಷರು : ಈಗ ಒಂದು ಕೆಲಸ ಮಾಡೋಣ.

ಶ್ರೀ ವೈ. ರಾಮಕೃಷ್ಣ : ಸ್ವಾಮಿ, ರೂಲ್ಸ್ ಆಫ್ ಪ್ರೊಸೀಜರ್ ಮಾಡಿರುವುದು ನಾವೆ.

ಅಧ್ಯಕ್ಷರು : ಒಂದು ಕೆಲಸ ಮಾಡೋಣ. ಮಾನ್ಯ ಮುನಿಯಪ್ಪನವರು ಮುಗಿಸಿಬಿಡಲಿ. ಇನ್ನೇನು 5 ನಿಮಿಷದಲ್ಲಿ ಮುಗಿಸಿಬಿಡುತ್ತಾರೆ. He is coming to the stage of completing his speech.

ಶ್ರೀಮತಿ ಪ್ರಮೀಳಾ ನೇಸರ್ಗಿ : ಸಭಾಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್. ಸ್ವಾಮಿ, ಸಭಾಧ್ಯಕ್ಷರೇ, ಇವತ್ತು ತಾವು ಬೇಡಿಕೆಗಳನ್ನು ಇಟ್ಟಿದ್ದೀರಿ. ನಾನು ಇದನ್ನು ಓದುತ್ತಿದ್ದೇನೆ. ಓದಿದಾಗ ಅನ್ನಿಸಿತು, ಬೇಡಿಕೆಗಳನ್ನು ಇಡಬೇಕಾದರೆ ಪರ್ಫಾರ್ಮೆನ್ಸ್ ಬಜೆಟ್ ಇಡಬೇಕಾದುದು ಕರ್ತವ್ಯ. ಪರ್ಫಾರ್ಮೆನ್ಸ್ ಬಜೆಟ್ ಕಾಪಿಗಳನ್ನು ನಮಗೆ

ಕೊಟ್ಟಿಲ್ಲ. ಒಂದು ವಾರಕ್ಕೆ ಮುಂಚೆ ಅದನ್ನು ಕೊಡಬೇಕು. ಕೊಡದಿದ್ದರೆ ಡಿಸ್ಕಷನ್ ಆಗುವುದಕ್ಕೆ ಬರುವುದಿಲ್ಲ ಎಂದು ಕೌಲ್ ಅಂಡ್ ಶಕ್ಧರ್‌ನಲ್ಲಿದೆ. ನಾನು ತಿಳಿದುಕೊಂಡಿದ್ದೇನೆ, ಹೋದಸಾರಿ ಸನ್ಮಾನ್ಯ ಸಭಾಧ್ಯಕ್ಷರಾಗಿದ್ದ ಬಣಕಾರ್ ಅವರು ಇದರ ಬಗ್ಗೆ ರೂಲಿಂಗ್ ಕೂಡ ಕೊಟ್ಟಿದ್ದಾರೆ. ನಾನು ಅದು ಓದುತ್ತೇನೆ. Copies of the performance budget......

(ಗೊಂದಲ)

ಶ್ರೀಮತಿ ಪ್ರಮಿಳಾ ನೇಸರ್ಗಿ : ಸ್ವಲ್ಪ ದಯವಿಟ್ಟು ಇರಿ.

ಶ್ರೀ ಜೆ.ಎಚ್. ಪಟೇಲ್ : ಮಾನ್ಯ ಸದಸ್ಯಣಿಯವರು ಕಾನೂನು ಪ್ರಕಾರ ಮಾತನಾಡುವುದಾದರೆ ಮಾತನಾಡಲಿ. ಇಲ್ಲಿ ಒಳಗೆ ಬಂದು ಕುಳಿತುಕೊಳ್ಳುವುದು, ಮತ್ತೆ ಸೀಟಿಗೆ ಹೋಗುವುದು ಬೇಡ. ಕುಳಿತುಕೊಳ್ಳುವುದಾದರೆ ಕುಳಿತುಕೊಳ್ಳಲಿ. ಎದ್ದು ಎದ್ದು ಹೋಗುವುದು ಸರಿಯಲ್ಲ.

ಶ್ರೀಮತಿ ಪ್ರಮಿಳ ನೇಸರ್ಗಿ : ಮಾನ್ಯ ಸಭಾಧ್ಯಕ್ಷರೆ, ಶಕ್ಧರ್ ಹೇಳಿರುವುದು,ನಾನು ನನ್ನ ಪುಸ್ತಕ ಓದುತ್ತಿಲ್ಲ. ಇದರಲ್ಲಿರುವಂತೆ ನಮಗೆ ಕಾಪಿಗಳನ್ನು ಕೊಟ್ಟಿಲ್ಲ ಇವತ್ತಿನ ವರೆಗೂ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್, ಸದಸ್ಯಣಿಯಾಗಿರತಕ್ಕ ಶ್ರೀಮತಿ ಪ್ರಮೀಳ ಅವರು ಎತ್ತಿರುವುದರ ಮೇಲೆ ಪಾಯಿಂಟ್ ಆಫ್ ಆರ್ಡರ್. ಪ್ರಮೀಳ ಅವರ ಮೇಲೆ ನನ್ನ ಪಾಯಿಂಟ್ ಆಫ್ ಆರ್ಡರ್. ಏನೆಂದರೆ, ತಾವು ಸದನದ ಅಧ್ಯಕ್ಷರಾಗಿ ತೀರ್ಪು ಕೊಟ್ಟಿದ್ದೀರಿ. ನೀವು ತೀರ್ಪು ಕೊಟ್ಟ ಮೇಲೆ ಇಲ್ಲಿ ಯಾರೂ ಚಕಾರ ಎತ್ತುವಹಾಗಿಲ್ಲ. ತಮ್ಮ ತೀರ್ಪು ಉಲ್ಲಂಘನೆಯಾಗಿದೆ ಎಂಬುದೆ ನನ್ನ ಪಾಯಿಂಟ್ ಆಫ್ ಆರ್ಡರ್. ದಯಮಾಡಿ ತಾವು ತೀರ್ಪುಕೊಡಬೇಕು. ಇದಕ್ಕೆ ಶ್ರೀಮತಿ ಪ್ರಮೀಳ ಅವರು ಕ್ಷಮಾಪಣೆ ಕೇಳಬೇಕು.

ಶ್ರೀಮತಿ ಪ್ರಮೀಳ ನೇಸರ್ಗಿ : ಕೇಳೋಣ. ಯಾರು ಕೊಡಬೇಕಾಗುತ್ತದೆ ನೋಡೋಣ. ನೀವು ಕೊಡಬೇಕೇ, ನಾನು ಕೊಡಬೇಕೇ, ಅಮೇಲೆ ತೀರ್ಮಾನವಾಗುತ್ತದೆ. ಮಾನ್ಯ ಸಭಾಧ್ಯಕ್ಷರೆ, ಇದು In connection with the discussion on the budget copies of annual reports of Ministers are made available to Members. ರಿಪೋರ್ಟ್ಸ್ ಕೊಡಲೇಬೇಕು. ಫರ್‌ಫಾರಮೆನ್ಸ್ ರಿಪೋರ್ಟ್ ಕೊಡದೆ, ಡಿಸ್‌ಕಷನ್ನೂ ಬರುವುದಿಲ್ಲ. ನೀವು ಮೂವ್ ಮಾಡುವುದಕ್ಕೂ ಆಗುವುದಿಲ್ಲ. ಮಾತನಾಡುವುದಕ್ಕೂ ಆಗುವುದಿಲ್ಲ. ಆದುದರಿಂದ ನೀವು ಮೊದಲು ತಮ್ಮ ಫರ್‌ಫಾರಮೆನ್ಸ್ ಬಜೆಟ್ ರಿಪೋರ್ಟನ್ನು ನಮಗೆ ಕೊಡಿ. ಕೊಟ್ಟ ಮೇಲೆ ಏನು ಮಾಡಬೇಕೆಂದರೆ, ಇದರ ಬಗ್ಗೆ ಮಾತನಾಡುವುದು ಮಾಡೋಣ. ಈಗಾಗಲೇ ತೀರ್ಮಾನವಾಗಿದೆ.

ಶ್ರೀ ಡಿ.ಟಿ. ಜಯಕುಮಾರ್ : ಡಿಮಾಂಡ್ಸ್ ಮೇಲೆ ಚರ್ಚೆ ಪ್ರಾರಂಭ ಮಾಡುವ ಮೊದಲೇ ಈ ಪ್ರಶ್ನೆಯನ್ನು ಎತ್ತಬೇಕಾಗಿತ್ತು. ಆದರೆ ಈಗ ಅವರು ಆ ಪ್ರಶ್ನೆಯನ್ನು ಎತ್ತುತ್ತಿದ್ದಾರೆ.

ಶ್ರೀಮತಿ ಪ್ರಮೀಳ ನೇಸರ್ಗಿ : ಮಾನ್ಯ ಅಧ್ಯಕ್ಷರೆ, Point of Order can be raised

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಬಿ.ಜೆ.ಪಿ.ಯವರು ವಿಧಾನ ಸಭೆಯನ್ನು ಛತ್ರ ಮಾಡಿಕೊಂಡುಬಿಟ್ಟಿದ್ದಾರೆ. ಇಲ್ಲಿ ಕಾನೂನು ಇಲ್ಲವೇ ದಯಮಾಡಿ ಹೇಳಿ. ಛತ್ರ ಅಲ್ಲ ಇದು. ಮದುವೆ ಛತ್ರ ಎಂದು ತಿಳಿದುಕೊಳ್ಳಬೇಡಿ ದಯಮಾಡಿ. ಮದುವೆ ಛತ್ರ ಅಲ್ಲ ಸಭೆ. ಗೌರವಯುತವಾಗಿರತಕ್ಕ ಸಭೆಗೆ ಗೌರವ ಕೊಡಿ. ಅಧ್ಯಕ್ಷರು ಹೇಳಿದ್ದಕ್ಕೆ ತಲೆಬಾಗಿ ನಡೆದುಕೊಳ್ಳಿ.

(ಗೊಂದಲ)

ಶ್ರೀಮತಿ ಪ್ರಮೀಳ ನೇಸರ್ಗಿ : ಕಳುಹಿಸಿ, ಕಳುಹಿಸಿ. ತಾವು ರೂಲ್ಸ್ ಪ್ರಕಾರ ಮಾತನಾಡುತ್ತೀರಲ್ಲಾ ರೂಲ್ಸ್‌ಪ್ರಕಾರವೇ. ನೀವು ಮಾಡಿರುವ ರೂಲ್ಸ್.

ಶ್ರೀ ಎಲ್.ಆರ್. ಶಿವರಾಮೇಗೌಡ : ಯಾವ ರೂಲ್ಸು?

ಶ್ರೀಮತಿ ಪ್ರಮೀಳ ನೇಸರ್ಗಿ : ಅದನ್ನೇ ನೀವು ಮಾಡಿ, ಇಲ್ಲಿ ಸದನದಲ್ಲಿ ಏನು ತೀರ್ಮಾನವಾಗಿದೆ, ಅದರ ಬಗ್ಗೆ ಯೋಚನೆ ಮಾಡೋಣ. ರೂಲ್ಸ್ ಪ್ರಕಾರ ಹೋಗಬೇಕಲ್ಲ, ಇಲ್ಲದಿದ್ದರೆ ತಪ್ಪಾಗಿಬಿಡುತ್ತೆ. ನಾವು ಕೇಳುತ್ತೇವೆ. ಇವತ್ತು ನೀವು ಏನು ಹೇಳಿದ್ದೀರಿ?

Copies of the performance budget of various Ministries and Departments received from respective ministerial departments are also made available to the Members in connection with the discussion on the demands for grants.

ಕೊಟ್ಟಿದ್ದೀರಾ ಮಾನ್ಯ ಸಭಾಧ್ಯಕ್ಷರೆ ಅದನ್ನು ಕೊಟ್ಟಿಲ್ಲ. ಇವತ್ತು ಇಲ್ಲಿ ಹೇಳುವುದಕ್ಕಿಂತ ಮುಂಚೆ ನಾನು ಹೋಗಿ ಕೇಳಿಕೊಂಡು ಬಂದೆ.

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : ಕುಳಿತು ಕೊಳ್ಳಿ ಒಂದು ನಿಮಿಷ. ನೀವು 8-10 ದಿವಸಗಳಿಂದ ಇರಲಿಲ್ಲ. ಏಕೆ ಇವತ್ತು ಬಂದಿರಿ?

ಶ್ರೀಮತಿ ಪ್ರಮೀಳ ನೇಸರ್ಗಿ : ನಾನು ಕೇಳಿ ಬಂದೆ. ಫರ್‌ಫಾರಮೆನ್ಸ್ ಬಡ್ಜೆಟ್ ರೆಡಿಯಾಗಿದೆಯಾ ಎಂದು ಕೇಳಿದೆ. ಇವತ್ತಿನವರೆಗೂ ರೆಡಿಯಾಗಿಲ್ಲ, ಕಾಪೀಸ್ ಬಂದಿಲ್ಲ ಎಂದು ಹೇಳಿದರು. ಆ ಇದರ ಮೇಲೆ ನಾನು ಕೇಳುತ್ತಿದ್ದೇನೆ.

Mr. Speaker : That's all the point of order, ಅಲ್ಲವೇ?

ಶ್ರೀಮತಿ ಪ್ರಮೀಳ ನೇಸರ್ಗಿ : ಆದ್ದರಿಂದ......

Mr. Speaker : I have heard you. ಈಗ ಮುನಿಯಪ್ಪನವರು ಕಂಟಿನ್ಯೂ ಮಾಡಿ.

ಶ್ರೀ ಎನ್. ರಾಜಣ್ಣ : ಪಾಯಿಂಟ್ ಆಫ್ ಆರ್ಡರ್ ರೂಲ್ ನಂ. 7..... Please direct. They have to maintain the decorum of the House.

(ಗೊಂದಲ)

ಶ್ರೀ ಬಿ. ಮುನಿಯಪ್ಪ : ಸನ್ಮಾನ್ಯ ಅಧ್ಯಕ್ಷರೆ, ತಾವು ಅನುಮತಿಯನ್ನು ಕೊಟ್ಟು, ತಮ್ಮ ಅನುಮತಿಯನ್ನು ಪಡೆದು ನಾನು ಮಾತನಾಡುತ್ತಿದ್ದೇನೆ. ಈಗ ಕಾರ್ಮಿಕ

(ಗೊಂದಲ)

ಶ್ರೀ ಬಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ತಾವು ಅನುಮತಿ ಕೊಟ್ಟರೆ ಅವರ ಸ್ಥಾನದಲ್ಲಿ ಕುಳಿತುಕೊಂಡು ಮಾತನಾಡಲಿ. ಸಭೆ ನಡೆಯುತ್ತಿರುವುದನ್ನು ಈ

ರೀತಿ ತಡೆಯುವುದು ಸರಿಯಾಗಿರುವುದಿಲ್ಲ. ಶಿಫ್ಟ್‌ಮಾಡಿಕೊಂಡು ಯಡಿಯೂರಪ್ಪನವರು ಮೊದಲು, ವೈ ರಾಮಕೃಷ್ಣರವರು, ನಂಜೇಗೌಡರು, ಹಾಗೂ ಶ್ರೀಮತಿ ಪ್ರಮಿಳ ರವರು ಈ ರೀತಿ ಮಾಡುವುದು ಒಳ್ಳೆಯದಲ್ಲ. ಒಳ್ಳೆಯ ಸಂಪ್ರದಾಯ ಅಲ್ಲ ಇದು. ಖಂಡಿತ ಒಳ್ಳೆಯದಲ್ಲ.

(ಗೊಂದಲ)

ಅಧ್ಯಕ್ಷರು : ಸನ್ಮಾನ್ಯ ವಿರೋಧ ಪಕ್ಷದ ನಾಯಕರು, ಹಿರಿಯ ಸದಸ್ಯರಾದಂತಹ ಶ್ರೀಮಾನ್ ನಂಜೇಗೌಡರು, ಇದಕ್ಕೂ ಸ್ವಲ್ಪ ಹೊತ್ತಿನ ಮೊದಲು ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಹಿರಿಯ ಸದಸ್ಯರಾದಂತಹ ವಾಟಾಳ್ ನಾಗರಾಜ್‌ರವರು ಎಲ್ಲರೂ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ನನ್ನ ಅಭಿಪ್ರಾಯವನ್ನು ತಿಳಿಸಿದ್ದೇನೆ. ಕಲಾಪ ನಡೆಯುತ್ತಿರುವ ಮಧ್ಯೆ ಸಭಾತ್ಯಾಗ ಮಾಡಿ ಹೋಗಿದ್ದವರು, ತಾವು ಪುನಃ ಬಂದಿರಿ. ನೀವು ಬಂದಿದ್ದಕ್ಕೆ ನನ್ನದೇನೂ ಆಕ್ಷೇಪಣೆ ಇಲ್ಲ. ಬರತಕ್ಕಂತಹ ಹಕ್ಕು ನಿಮಗೆ ಇದೆ. ಬರಬೇಕೆಂಬುದು ನಮ್ಮ ಅಪೇಕ್ಷೆ ಕೂಡ. ಬಂದು ಪುನಃ ಮಧ್ಯೆ ಧರಣೆ ಕುಳಿತಿದ್ದೀರಿ. ಅದು ನಿಮ್ಮ ಹಕ್ಕು. ಅದಕ್ಕೂ ನಾನು ಆಕ್ಷೇಪಣೆ ಮಾಡುವುದಿಲ್ಲ. ಸದನದ ಕಲಾಪ ನಡೆಯುತ್ತಿರ ಬೇಕಾದರೆ. ಬೇ-ಜವಾಬ್ದಾರಿ, ಬೇ-ಜವಾಬ್ದಾರಿ ಯಾವುದೂ ನಡೆಯಬಾರದು ಎಂದು ಹೇಳಿದರೆ ನೀವು ಹೇಳಿದಂತೆ ಸದನ ನಡೆಯಬೇಕೇ? ಅಥವಾ ಸದನ ಪೂರ್ವ ನಿಗದಿತ ಕಾರ್ಯಕ್ರಮದಂತೆ ನಡೆದುಕೊಂಡು ಹೋಗಬೇಕೇ ವಿಶ್ವೇಶ್ವರ ಹೆಗ್ಗಡೆಯವರೆ ಸ್ವಲ್ಪ ಹೇಳಿ ನೀವು ಇನ್ನೂ 10 ತಿಂಗಳು ಆಗಿದೆ ಅಸೆಂಬ್ಲಿ ಒಳಗೆ ಬಂದು. ನಮಗೆ 10 ವರ್ಷಗಳಾಗಿದೆ. ನೀವು ಬಂದು 10 ತಿಂಗಳು ಆಗಿದೆ. ಪೂರ್ವ ನಿಗದಿತ ಕಾರ್ಯಕ್ರಮವನ್ನು ಅಡ್ಡಿಪಡಿಸತಕ್ಕಂತಹದ್ದು ಜವಾಬ್ದಾರಿಯೇ? ಹೇಳಿ ಸ್ವಲ್ಪ.

(ಶ್ರೀ ವಿಶ್ವೇಶ್ವರ ಹೆಗ್ಗಡೆಯವರು ವೆಲ್‌ನಲ್ಲಿ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು : ದಯಮಾಡಿ ನಿಲ್ಲಿಸಿ. ಅಲ್ಲಿ ನಿಂತು ಮಾತನಾಡುವ ಹಾಗೆ ಇಲ್ಲ ನೀವು. Mr. Muniyappa to speak. ಹೀಗೆ ಮಾತನಾಡಿದರೆ I will put the demands to vote.

(ಗೊಂದಲ)

ಶ್ರೀ ಬಿ. ಮುನಿಯಪ್ಪ : ಸನ್ಮಾನ್ಯ ಅಧ್ಯಕ್ಷರೆ, ಏನು.......

(ಗೊಂದಲ)

ಅಧ್ಯಕ್ಷರು : ನೀವು ಡಿಮಾಂಡ್ಸ್ ಮೇಲೆ ಡಿಸ್‌ಕಷನ್ಸ್ ಮಾಡುವುದನ್ನು ಕಳೆದುಕೊಂಡಿರಿ.

(ಗೊಂದಲ)

ಅಧ್ಯಕ್ಷರು : ಆಯಿತು. ನನ್ನ ಕರ್ತವ್ಯವನ್ನು ನಾನು ಮಾಡಬೇಕು. ನನಗೆ

(ಗೊಂದಲ)

ಅಧ್ಯಕ್ಷರು : ನಿಮ್ಮ ಸರ್ಕಾರದ ಸಹಾಯ ಬೇಕೇ ಹೊರತು, ನಿಮ್ಮ ಪರಸ್ಪರ ಜಗಳದ ಸಂಬಂಧ ನನಗಿಲ್ಲ. ನಾನು ಕರ್ತವ್ಯವನ್ನು ನಿರ್ವಹಣೆ ಮಾಡಬೇಕು.

(ಗೊಂದಲ)

MR. Speaker : I am putting the demands to vote. 1995-96ನೇ ಸಾಲಿನ ಅನುದಾನ ಬೇಡಿಕೆಗಳಿಗೆ ಸಂಬಂಧಿಸಿದ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಹೀಗಿದೆ.

"ದಿನಾಂಕ 31-3-1996 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 11, 14, 10, 26, 13, 58, 12, 57, 56, 1, 2, 3, 4, 46, 47, 27, 30, 31, 32. ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗಳನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ) ಮಂಜೂರು ಮಾಡುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ಕ್ರಮಾಂಕ 11 - ಉನ್ನತ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಉನ್ನತ ಶಿಕ್ಷಣಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 272,57,15,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 30,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 14 - ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ" ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 14,36,33,75,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 10 - ಲೇಖನ ಸಾಮಗ್ರಿ ಮತ್ತು ಮುದ್ರಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಲೇಖನ ಸಾಮಗ್ರಿ ಮತ್ತು ಮುದ್ರಣ" ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 23,66,69,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ – 26 - ವಾರ್ತಾ ಮತ್ತು ಪ್ರಚಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಾರ್ತಾ ಮತ್ತು ಪ್ರಚಾರ"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 11,50,56,000 ರೂ.ಗಳಿಗಿಂತ

ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 13 - ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ"ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 15,36,06,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 58-ಮಹಿಳಾ ಮತ್ತು ಮಕ್ಕಳ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಹಿಳಾ ಮತ್ತು ಮಕ್ಕಳ ಕಲ್ಯಾಣ"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 259,24,52,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 100,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾತಿ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 12-ಯುವಜನ ಸೇವೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996ರಂದು ಕೊನೆಗೊಳ್ಳುವ ಆರ್ಥಿಕಕ ವರ್ಷದಲ್ಲಿ "ಯುವಜನ ಸೇವೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 32,40,90,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 57 - ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದವರ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದವರ ಕಲ್ಯಾಣ"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 261,97,83,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 25,31,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 56 - ಕಾರ್ಮಿಕ ಮತ್ತು ಉದ್ಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾರ್ಮಿಕ ಮತ್ತು ಉದ್ಯೋಗ"ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥಕ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 64,88,83,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 1-ವ್ಯವಸಾಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವ್ಯವಸಾಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 223,12,72,000 ರೂ.ಗಳಿಗಿಂತ ಮೀರದ ಮೊತ್ತವನ್ನು

ಮತ್ತು ಬಂಡವಾಳ ಖಾತೆಯಲ್ಲಿ 374,59,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 2 - ತೋಟಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ತೋಟಗಾರಿಕೆ"ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚದಲ್ಲಿ ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 61,91,69,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 75,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 3 - ಪಶುಸಂಗೋಪನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪಶುಸಂಗೋಪನೆಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 95,59,43,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 40,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 4 - ಮೀನುಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮೀನುಗಾರಿಕೆಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 19,38,17,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 6,97,09,000 ರೂ.ಗಳಿಗಿಂತ ಮೀರದ ಮೊತ್ತವನ್ನು, (ಲೇಖಾನುದಾನದಲ್ಲಿ ಮಂಜುರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 46-ರೇವು ಮತ್ತು ಜಲಸಾರಿಗೆ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರೇವು ಮತ್ತು ಜಲಸಾರಿಗೆ ಸೇವೆಗಳಿಗಾಗಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 330,28,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 6,72,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 47-ವಿದ್ಯುಚ್ಛಕ್ತಿ ಯೋಜನೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಿದ್ಯುಚ್ಛಕ್ತಿ ಯೋಜನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 100,05,98,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 203,79,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ – 27 - ಪ್ರವಾಸೋದ್ಯಮ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪ್ರವಾಸೋದ್ಯಮಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 10,04,69,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ – 30 - ಗೃಹ ನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗೃಹ ನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)"ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 51,49,26,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 38,93,84,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ – 31 - ನಗರಾಭಿವೃದ್ಧಿ – (ಬೆಂಗಳೂರು ಅಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲ ಸೌಕರ್ಯ ವ್ಯವಸ್ಥೆ ಅಭಿವೃದ್ಧಿ ನಿಗಮವನ್ನು ಹೊರತುಪಡಿಸಿ.)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನಗರಾಭಿವೃದ್ಧಿ" (ಬೆಂಗಳೂರು ಅಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲ ಸೌಕರ್ಯ ವ್ಯವಸ್ಥೆ ಅಭಿವೃದ್ಧಿ ನಿಗಮವನ್ನು ಹೊರತು ಪಡಿಸಿ) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 164,15,08,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 108,21,76,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 32 - ಬೆಂಗಳೂರು ಅಭಿವೃದ್ಧಿ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಬೆಂಗಳೂರು ಅಭಿವೃದ್ಧಿ"ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 11,43,508,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 25,10,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಧ್ಯಕ್ಷರು : ಈಗ ಸಭೆಯನ್ನು ಮುಂದೂಡಿ ನಾಳೆ ಬೆಳಿಗ್ಗೆ 10-00 ಗಂಟೆಗೆ ಸಭೆ ಮತ್ತೆ ಸಮಾವೇಶಗೊಳ್ಳಲಿದೆ.

(ಸಭೆಯ ಕಾರ್ಯಕಲಾಪಗಳನ್ನು ಮಾಧ್ಯಾಹ್ನ 3-58 ಗಂಟೆಗೆ ಮುಂದೂಡಿ ನಾಳೆ ಮತ್ತೆ ದಿನಾಂಕ 14-9-95ರ ಗುರುವಾರ ಬೆಳಿಗ್ಗೆ 10-00 ಗಂಟೆಗೆ ಪುನಃ ಸಮಾವೇಶಗೊಳ್ಳಲು ತೀರ್ಮಾನಿಸಲಾಯಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)